# KARNATAKA LOKAYUKTA

No.UPLOK-2/DE.16/2018/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 24.03.2022

## RECOMMENDATION

Sub:- Departmental inquiry against (1) Sri N.Ramachandrappa, Retired Principal,No.123, Ward No.6, Railway Station Road, Kolar and (2) Sri Mohammed Rafi Ahmed, the then in-charge Deputy Treasury Officer, Treasury Department, Srinivasapura, Kolar District– reg.

Ref:- 1) Government Order No.(1) ED 64 DGD 2017 dated 11.05.2017, Corrigendum dated 11.5.2017 and (2) FD 44 FTD 2017 dated 22.05.2017.

2) Nomination order No. UPLOK-2/DE.16/2018 dated 08.01.2018 of Hon'ble Upalokayukta, State of Karnataka.

3) Inquiry report dated 21.03.2022 of Additional Registrar of Enquiries-14, Karnataka Lokayukta, Bengaluru.

~~~~~~

The Government by its orders dated 11.05.2017 and 22.05.2017 and the Corrigendum dated 11.5.2017, initiated the disciplinary proceedings against (1) Sri N.Ramachandrappa, Retired Principal,No.123, Ward No.6, Railway Station Road, Kolar and (2) Sri Mohammed Rafi
~~~~~~

Ahmed, the then in-charge Deputy Treasury Officer, Treasury Department, Srinivasapura, Kolar District, [hereinafter referred to as Delinquent Government Officials, for short as 'DGOs 1 and 2' respectively ] and entrusted the Departmental Inquiry to this Institution.

2. This Institution by Nomination Order No. UPLOK-2/DE.16/2018 dated 08.01.2018 nominated Additional Registrar of Enquiries-7, Karnataka Lokayukta, Bengaluru, as the Inquiry Officer to frame charges and to conduct departmental inquiry against DGOs for the alleged charge of misconduct, said to have been committed by them. Subsequently, Additional Registrar of Enquiries-14 was re-nominated as Inquiry Officer to continue the said inquiry.

3. The DGOs were tried for the charge of not remitting the cheques towards scholarship of students to the Bank in time for encashment and thereby committed misconduct.

4. The Inquiry Officer (Additional Registrar of Enquiries-14) on proper appreciation of oral and documentary

evidence has held that, the Disciplinary Authority has *'not proved'* the above charge against the DGO 1 Sri N.Ramachandrappa, and DGO 2 Sri Mohammed Rafi Ahmed.

5. On re-consideration of report of inquiry, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer and exonerate DGO 1 Sri N.Ramachandrappa, Retired Principal, and DGO 2 Sri Mohammed Rafi Ahmed, the then in-charge Deputy Treasury Officer, Treasury Department, Srinivasapura, Kolar District, of the charges leveled against them.

6. Action taken in the matter shall be intimated to this Authority.

Connected records are enclosed herewith.

24/3/22

**(JUSTICE B.S.PATIL)**
Upalokayukta-2,
State of Karnataka.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-16/2018/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 21/03/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ (1) ಶ್ರೀ. ಎನ್ ರಾಮಚಂದ್ರಪ್ಪ, ಹಿರಿಯ ನಾಗರೀಕರು ಮತ್ತು ಸಮಾಜ ಸೇವಕರು (ನಿವೃತ್ತ ಪ್ರಾಂಶುಪಾಲರು), ನಂ.123, ವಾರ್ಡ್ ನಂ.6, ರೈಲ್ವೇ ಸ್ಟೇಷನ್ ರಸ್ತೆ, ಕೋಲಾರ ಮತ್ತು (2) ಶ್ರೀ. ಮೊಹಮದ್ ರಫಿ ಅಹಮದ್, ಮುಖ್ಯ ಲೆಕ್ಕಿಗರು, ಖಜಾನೆ ಇಲಾಖೆ, ಹಿಂದಿನ ಉಪ ಖಜಾನಾಧಿಕಾರಿ, ಖಜಾನೆ ಇಲಾಖೆ ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**

1. ಕಂಪ್ಲೆಂಟ್/ಉಪಲೋಕ್/ಬಿಡಿ/530/2016/ಉನಿವಿ-4 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 23/02/2017.
2. ಸರ್ಕಾರದ
   i. ಆದೇಶ ಸಂಖ್ಯೆ: ಇಡಿ 64 ಡಿಜಿಡಿ 2017, ಬೆಂಗಳೂರು, ದಿನಾಂಕ: 11/05/2017.
   ii. ಆದೇಶ ಸಂಖ್ಯೆ: ಆಇ 44 ಆಖಇ 2017, ಬೆಂಗಳೂರು, ದಿನಾಂಕ: 22/05/2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/16/2018, ಬೆಂಗಳೂರು ದಿನಾಂಕ: 08/01/2018.
4. Order No.UPLOK-1&2/DE/Transfers/2018 Bengaluru, Dtd: 06/08/2018 file is transferred from ARE-7 to ARE-14.

* * * * * *

ಈ ವಿಚಾರಣೆಯಲ್ಲಿ ಶ್ರೀ. ಎನ್ ರಾಮಚಂದ್ರಪ್ಪ, ಹಿರಿಯ ನಾಗರೀಕರು ಮತ್ತು ಸಮಾಜ ಸೇವಕರು (ನಿವೃತ್ತ ಪ್ರಾಂಶುಪಾಲರು), ನಂ.123, ವಾರ್ಡ್ ನಂ.6, ರೈಲ್ವೇ ಸ್ಟೇಷನ್ ರಸ್ತೆ, ಕೋಲಾರ ಇವರು 3 ಎದುರುದಾರರ ವಿರುದ್ಧ ದೂರನ್ನು ಸಲ್ಲಿಸಿದ್ದು, ಸದರಿ ದೂರನ್ನು ತನಿಖೆಗಾಗಿ ಈ ಸಂಸ್ಥೆಯಿಂದ ಪೋಲಿಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೋಲಾರ ಇವರಿಗೆ ವಹಿಸಿದ್ದು, ಸದರಿಯವರು ದೂರಿನ ತನಿಖೆಯನ್ನು ಕೈಗೊಳ್ಳಲು ಅವರ ಅಧೀನ ಅಧಿಕಾರಿಯಾದ ಶ್ರೀ. ಸಿ.ಎ ಸಿದ್ದಲಿಂಗಯ್ಯ, ಪೋಲಿಸ್ ನಿರೀಕ್ಷಕರು, ಕ.ಲೋ, ಕೋಲಾರ (ತನಿಖಾಧಿಕಾರಿಗಳು) ಅವರಿಗೆ ಆದೇಶಿಸಿದನ್ವಯ, ತನಿಖಾಧಿಕಾರಿಗಳು ತನಿಖೆಯನ್ನು ಕೈಗೊಂಡು ಶ್ರೀ. ಎನ್ ರಾಮಚಂದ್ರಪ್ಪ (ಈಗಾಗಲೇ ದೂರನ್ನು ಸಲ್ಲಿಸಿದವರು) ಇವರು ಕರ್ತವ್ಯ ಲೋಪ ಎಸಗಿರುತ್ತಾರೆ ಹಾಗೂ ಒಬ್ಬ ಶ್ರೀ. ಮೊಹಮದ್ ರಫಿ ಅಹಮದ್, ಮುಖ್ಯ ಲೆಕ್ಕಿಗರು, ಖಜಾನೆ ಇಲಾಖೆ, ಹಿಂದಿನ ಉಪ ಖಜಾನಾಧಿಕಾರಿ, ಖಜಾನೆ ಇಲಾಖೆ ಇವರು ಸಹ ಕರ್ತವ್ಯ ಲೋಪ ಎಸಗಿರುತ್ತಾರೆ ಅಂತಾ ಇವರ ವಿರುದ್ಧ ವಿಚಾರಣೆಯನ್ನು ಕೈಗೊಳ್ಳಲು ಈ ಶಾಖೆಗೆ ಕಳುಹಿಸಿಕೊಟ್ಟಿರುತ್ತಾರೆ. ಆದ್ದರಿಂದ, ಈ ಪ್ರಕರಣದಲ್ಲಿ ತನಿಖಾಧಿಕಾರಿಗಳನ್ನು ದೂರುದಾರರಾಗಿ ಮಾಡಿಕೊಂಡಿದ್ದು ಇರುತ್ತದೆ. ತನಿಖಾಧಿಕಾರಿಗಳ ಪ್ರಕಾರ 1ನೇ ಆ.ಸ.ನೌ.ರ ಶ್ರೀ.ಎನ್.ರಾಮಚಂದ್ರಪ್ಪ, ಪ್ರಾಂಶುಪಾಲರಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಗೌನಪಲ್ಲಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಗೌನಪಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಎಸ್.ಸಿ/ಎಸ್.ಟಿ. ವಿದ್ಯಾರ್ಥಿಗಳಿಗೆ ಮಂಜೂರಾಗಿದ್ದ ವಿದ್ಯಾರ್ಥಿ ವೇತನ ಶುಲ್ಕ 30-3-2013ರ ದಿನಾಂಕದ ಚೆಕ್‌ಗಳು ವಿತರಣೆಯಾಗಿದ್ದು, ಶ್ರೀ.ಎನ್.ರಾಮಚಂದ್ರಪ್ಪ ದಿ:25-6-2013 ರಂದು ಚೆಕ್‌ಗಳ ಹಿಂಭಾಗ ಸಹಿ ಮಾಡಿ ಸ್ವೀಕರಿಸಿ, ದಿ:01-07-2013 ರಂದು ಗೌನಪಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾಗೆ ಅವಧಿ ಮುಗಿದ ನಂತರ ನಗದೀಕರಣಕ್ಕೆ ಸಲ್ಲಿಸಿರುತ್ತಾರೆ. ಮುಂದುವರೆದು, ಚೆಕ್‌ಗಳ ನಗದೀಕರಣ ಅವಧಿ ದಿ:30-6-2013ಕ್ಕೆ ಮುಗಿದಿದ್ದ ಕಾರಣ ಬ್ಯಾಂಕಿನಿಂದ ಚೆಕ್‌ಗಳನ್ನು ಸ್ವೀಕರಿಸದೇ ವಾಪಸ್ಸು ನೀಡಿದ್ದು, 2012-13ನೇ ಸಾಲಿನ ಹಾಸ್ಟೆಲ್ ಎಸ್.ಸಿ/ಎಸ್.ಟಿ. ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಶುಲ್ಕಕ್ಕೆ ಸಂಬಂಧಿಸಿದ ಒಟ್ಟು ಮೊತ್ತ ರೂ.71,606/-ಗಳ ಎರಡು ಚೆಕ್‌ಗಳ ದಿನಾಂಕ

ನವೀಕರಣಗೊಳ್ಳದೇ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಶುಲ್ಕ ಪಾವತಿಯಾಗದಿರುವುದು ಕಂಡುಬರುತ್ತದೆ.

2. 2ನೇ ಆ.ಸ.ನೌ.ರ ಶ್ರೀ.ಮಹಮ್ಮದ್ ರಫಿ ಅಹಮದ್ ರವರು ಪ್ರಭಾರ ಉಪ ಖಜಾನಾಧಿಕಾರಿಗಳಾಗಿ, ಶ್ರೀನಿವಾಸಪುರ, ಕೋಲಾರ ಜಿಲ್ಲೆ ಕರ್ತವ್ಯ ನಿರ್ವಹಿಸುತ್ತಿದ್ದಾಗ ಗೌನಪಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಚೆಕ್‌ಗಳ ದಿನಾಂಕಗಳನ್ನು ನವೀಕರಿಸಲು ದಿ:27–8–2013 ರಂದು ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರ ರವರಿಗೆ ಸಲ್ಲಿಸಿಕೊಂಡಿದ್ದು, ಅವರು ದಿ:16–12–2013 ರಂದು ನವೀಕರಣ ಸಲುವಾಗಿ ಚೆಕ್‌ಗಳನ್ನು ಶ್ರೀನಿವಾಸಪುರ ಉಪಖಜಾನೆಗೆ ಕಳುಹಿಸಿದ್ದರೂ ಸಹ ಚೆಕ್‌ಗಳ ದಿನಾಂಕ ನವೀಕರಣ ಮಾಡದೇ ಇದ್ದ ಕಾರಣ ಒಂದು ವರ್ಷಕ್ಕೆ ಮೇಲ್ಪಟ್ಟು ಬ್ಯಾಂಕಿನಲ್ಲಿ ಪಾವತಿಯಾಗದೇ ಇದ್ದು, ಸದರಿ ಚೆಕ್‌ಗಳನ್ನು ಜಿಲ್ಲಾ ಖಜಾನೆ, ಕೋಲಾರ ರವರ ಮುಖಾಂತರ ಮಹಾಲೇಖಪಾಲರು, ಬೆಂಗಳೂರು ರವರಿಗೆ ಸಲ್ಲಿಸಿದ್ದು ಇರುತ್ತದೆ ಅಂತಾ ಕಂಡುಬರುತ್ತದೆ.

3. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 11/05/2017 ಮತ್ತು 22/05/2017ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ವಹಿಸಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 08/01/2018 ರಂದು ಅಪರ ನಿಬಂಧಕರು, ವಿಚಾರಣೆಗಳು–7 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4) ರಂತೆ ಅಪರ ನಿಬಂಧಕರು ವಿಚಾರಣೆಗಳು–7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು–14 ರವರಿಗೆ ವರ್ಗಾವಣೆಗೊಂಡಿರುತ್ತದೆ.

4. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ (1) ಶ್ರೀ. ಎನ್ ರಾಮಚಂದ್ರಪ್ಪ, ಹಿರಿಯ ನಾಗರೀಕರು ಮತ್ತು ಸಮಾಜ ಸೇವಕರು (ನಿವೃತ್ತ ಪ್ರಾಂಶುಪಾಲರು), ನಂ.123, ವಾರ್ಡ್ ನಂ.6, ರೈಲ್ವೇ ಸ್ಟೇಷನ್ ರಸ್ತೆ, ಕೋಲಾರ ಮತ್ತು (2) ಶ್ರೀ. ಮೊಹಮದ್ ರಫಿ ಅಹಮದ್, ಮುಖ್ಯ ಲೆಕ್ಕಿಗರು, ಖಜಾನೆ ಇಲಾಖೆ, ಹಿಂದಿನ ಉಪ ಖಜಾನಾಧಿಕಾರಿ, ಖಜಾನೆ ಇಲಾಖೆ ಇವರುಗಳ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು ಅಪರ ನಿಬಂಧಕರು, ವಿಚಾರಣೆಗಳು-7 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 23/06/2018 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ-1

## ದೋಷಾರೋಪಣೆ-1

2. 1ನೇ ಆ.ಸ.ನೌ.ರ ಶ್ರೀ.ಎನ್.ರಾಮಚಂದ್ರಪ್ಪ ಆದ ನೀವು ಪ್ರಾಂಶುಪಾಲರಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಗೌನಪಲ್ಲಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಗೌನಪಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಎಸ್.ಸಿ/ಎಸ್.ಟಿ. ವಿದ್ಯಾರ್ಥಿಗಳಿಗೆ ಮಂಜೂರಾಗಿದ್ದ ವಿದ್ಯಾರ್ಥಿ ವೇತನ ಶುಲ್ಕ 30-3-2013ರ ದಿನಾಂಕದ ಚೆಕ್‌ಗಳು ವಿತರಣೆಯಾಗಿದ್ದು, ಸದರಿ ಚೆಕ್‌ಗಳನ್ನು 1ನೇ ಆ.ಸ.ನೌ.ರ ಶ್ರೀ.ಎನ್.ರಾಮಚಂದ್ರಪ್ಪ ಆದ ನೀವು ದಿ:25-6-2013 ರಂದು ಚೆಕ್‌ಗಳ ಹಿಂಭಾಗ ಸಹಿ ಮಾಡಿ ಸ್ವೀಕರಿಸಿ, ದಿ:01-07-2013 ರಂದು ಗೌನಪಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾಗೆ ಅವಧಿ ಮುಗಿದ ನಂತರ ನಗದೀಕರಣಕ್ಕೆ ಸಲ್ಲಿಸಿ ಕರ್ತವ್ಯಲೋಪ ಎಸಗಿರುತ್ತೀರಿ.

3. ಮುಂದುವರೆದು, ಚೆಕ್‌ಗಳ ನಗದೀಕರಣ ಅವಧಿ ದಿ:30-6-2013ಕ್ಕೆ ಮುಗಿದಿದ್ದ ಕಾರಣ ಬ್ಯಾಂಕಿನಿಂದ ಚೆಕ್‌ಗಳನ್ನು ಸ್ವೀಕರಿಸದೇ ವಾಪಸ್ಸು ನೀಡಿದ್ದು, 2012-13ನೇ ಸಾಲಿನ ಹಾಸ್ಟೆಲ್ ಎಸ್.ಸಿ/ಎಸ್.ಟಿ. ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಶುಲ್ಕಕ್ಕೆ ಸಂಬಂಧಿಸಿದ ಒಟ್ಟು ಮೊತ್ತ ರೂ.71,606/- ಗಳ ಎರಡು ಚೆಕ್‌ಗಳ ದಿನಾಂಕ ನವೀಕರಣಗೊಳ್ಳದೇ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಶುಲ್ಕ ಪಾವತಿಯಾಗದಿರಲು 1 ನೇ ಆ.ನೌ.ರರಾದ ನೀವು ಕರ್ತವ್ಯ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿತನದಿಂದ ವರ್ತಿಸಿ ಕರ್ತವ್ಯ ಲೋಪ ಮತ್ತು ಕರ್ತವ್ಯ ಚ್ಯುತಿ ಎಸಗಿರುತ್ತೀರಿ.

4. 2ನೇ ಆ.ಸ.ನೌ.ರ ಶ್ರೀ.ಮಹಮ್ಮದ್ ರಫಿ ಅಹಮದ್ ಆದ ನೀವು ಪ್ರಭಾರ ಉಪ ಖಜಾನಾಧಿಕಾರಿಗಳಾಗಿ, ಶ್ರೀನಿವಾಸಪುರ, ಕೋಲಾರ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಗೌನಪಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಚೆಕ್‌ಗಳ ದಿನಾಂಕಗಳನ್ನು ನವೀಕರಿಸಲು ದಿ:27-8-2013 ರಂದು ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರ ರವರಿಗೆ ಸಲ್ಲಿಸಿಕೊಂಡಿದ್ದು, ಅವರು ದಿ:16-12-2013 ರಂದು ನವೀಕರಣ ಸಲುವಾಗಿ ಚೆಕ್‌ಗಳನ್ನು ಶ್ರೀನಿವಾಸಪುರ ಉಪಖಜಾನೆಗೆ ಕಳುಹಿಸಿದ್ದರೂ ಸಹ ಚೆಕ್‌ಗಳ ದಿನಾಂಕ ನವೀಕರಣ ಮಾಡದೇ ಇದ್ದ ಕಾರಣ ಒಂದು ವರ್ಷಕ್ಕೆ ಮೇಲ್ಪಟ್ಟು ಬ್ಯಾಂಕಿನಲ್ಲಿ ಪಾವತಿಯಾಗದೇ ಇದ್ದು, ಸದರಿ ಚೆಕ್‌ಗಳನ್ನು ಜಿಲ್ಲಾ ಖಜಾನೆ, ಕೋಲಾರ ರವರ ಮುಖಾಂತರ ಮಹಾಲೇಖಪಾಲರು, ಬೆಂಗಳೂರು ರವರಿಗೆ ಸಲ್ಲಿಸಿದ್ದು 2ನೇ ಆ.ಸ.ನೌ.ರರಾದ ನೀವು ಕರ್ತವ್ಯ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿತನದಿಂದ ವರ್ತಿಸಿ ಕರ್ತವ್ಯ ಲೋಪ ಮತ್ತು ಕರ್ತವ್ಯ ಚ್ಯುತಿ ಎಸಗಿರುತ್ತೀರಿ.

5. ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ-2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

6. ಶ್ರೀ.ಎನ್.ರಾಮಚಂದ್ರಪ್ಪ, ಹಿರಿಯ ನಾಗರೀಕರು ಮತ್ತು ಸಮಾಜ ಸೇವಕರು (ನಿವೃತ್ತ ಪ್ರಾಂಶುಪಾಲರು), ನಂ.123, ವಾರ್ಡ್ ನಂ.6, ರೈಲು ನಿಲ್ದಾಣದ ರಸ್ತೆ, ಕೋಲಾರ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು 1) ಶ್ರೀಮತಿ.ಶಾಂತಮ್ಮ, ಸಹಾಯಕ ಸಮಾಜ ಕಲ್ಯಾಣಾಧಿಕಾರಿ, ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ, 2) ಶ್ರೀ.ರಾಮಸ್ವಾಮಿ, ಸಹಾಯಕ ಸಮಾಜ ಕಲ್ಯಾಣಾಧಿಕಾರಿ, ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಹಾಗೂ 3) ಶ್ರೀ.ವೈ.ಆರ್.ಉಪೇಂದ್ರ, ಪ್ರಥಮ ದರ್ಜೆ ಸಹಾಯಕ, ಸರ್ಕಾರಿ ಪದವಿ ಪೂರ್ವ ಕಾಲೇಜು, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ, ರವರುಗಳ ವಿರುದ್ಧ ನೀಡಿದ ದೂರಿನನ್ವಯ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿತ್ತು.

7. <u>ಪ್ರಕರಣದ ಸಂಕ್ಷಿಪ್ತ ಸಾರಾಂಶ:–</u> ದೂರುದಾರರು ತಮ್ಮ ದೂರಿನಲ್ಲಿ 2012–13ನೇ ಸಾಲಿನ ಹಾಸ್ಟೆಲ್ ವಿದ್ಯಾರ್ಥಿಗಳ ಸಂಬಂಧ "ವಿದ್ಯಾರ್ಥಿ ವೇತನ" (1) ಚೆಕ್ ಸಂ.ಸಿಎಫ್ 807389ಕ್ಕೆ ರೂ.26,936/– ಮತ್ತು (2) ಚೆಕ್ ಸಂ.ಸಿ.ಎಫ್.807393ಕ್ಕೆ ರೂ.44,670/– ಒಟ್ಟು ರೂ.71,606/– ಗಳನ್ನು ದೂರಿನಲ್ಲಿನ ಆಪಾದಿತರು ದುರುಪಯೋಗಪಡಿಸಿಕೊಂಡಿದ್ದಾರೆಂದು ಆಪಾದಿಸಿದ್ದರು.

8. ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೋಲಾರ ರವರನ್ನು ಕೇಳಲಾಗಿ, ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೋಲಾರ (ಇನ್ನು ಮುಂದೆ 'ತನಿಖಾಧಿಕಾರಿಗಳು' ಎಂದು ಕರೆಯಲಾಗುವುದು) ರವರು ತಮ್ಮ ವರದಿಯನ್ನು ಸಲ್ಲಿಸಿ ಗೌನಪಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ 2012–13ನೇ ಸಾಲಿನ ಹಾಸ್ಟೆಲ್ ಎಸ್.ಸಿ/ಎಸ್.ಟಿ. ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಶುಲ್ಕಕ್ಕೆ ಸಂಬಂಧಿಸಿದ ಒಟ್ಟು ಮೊತ್ತ ರೂ.71,606/– ಗಳ ಎರಡು ಚೆಕ್‌ಗಳ ದಿನಾಂಕ ನವೀಕರಣಗೊಳ್ಳದೇ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಶುಲ್ಕ ಪಾವತಿಯಾಗದಿರಲು 1 ಮತ್ತು 2ನೇ ಆ.ನೌ.ರರ ಕರ್ತವ್ಯ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿತನ ಕಾರಣವಾಗಿರುತ್ತದೆ ಎಂದು ತಿಳಿಸಿದ್ದರು.

9. ತನಿಖಾಧಿಕಾರಿಗಳ ವರದಿಗೆ 1 ಮತ್ತು 2ನೇ ಆ.ಸ.ನೌ.ರರು ಉತ್ತರವನ್ನು ಸಲ್ಲಿಸಿ ವರದಿಯಲ್ಲಿನ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ಆದರೆ, ಸದರಿ ಆಕ್ಷೇಪಣೆಗಳು ಒಪ್ಪಲು ಅರ್ಹವಾಗಿರುವುದಿಲ್ಲ.

10. ದೂರು ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ 1 ಮತ್ತು 2ನೇ ಆ.ಸ.ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠತೆಯನ್ನು ತೋರಿಸದೆ ಮತ್ತು ಸರ್ಕಾರಿ

ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾದ್ದರಿಂದ 1 ಮತ್ತು 2ನೇ ಆ.ಸ.ನೌಕರರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಕ್ರಮ ಜರುಗಿಸಬಹುದಾಗಿದೆ ಎಂದು ಕಂಡುಬಂದಿರುತ್ತದೆ.

11. ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ 1 ಮತ್ತು 2ನೇ ಆ.ಸ.ನೌಕರರಾದ ನೀವು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದೀರೆಂದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ 1 ಮತ್ತು 2ನೇ ಆ.ಸ.ನೌಕರರಾದ ನಿಮ್ಮ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಸದರಿ ಶಿಫಾರಸಿನ ಮೇರೆಗೆ ಸರ್ಕಾರವು 1 ಮತ್ತು 2ನೇ ಆ.ಸ.ನೌಕರರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತ-2ರವರಿಗೆ ವಹಿಸಿ ಆದೇಶ ಮಾಡಿದೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

5. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರುಗಳು ದಿನಾಂಕ: 27/07/2018 ರಂದು ಹಾಜರಾಗಿದ್ದು, ಆ.ಸ.ನೌ.ರವರುಗಳ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್ (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರುಗಳು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

6. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

7. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರುಗಳಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌ–1 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ಚೆಕ್‌ಗಳನ್ನು ನಗದಿಕರಣಕ್ಕೆಂದು ಬ್ಯಾಂಕಿಗೆ ಸಲ್ಲಿಸುವಾಗ ಚೆಕ್ಕುಗಳ ಹಿಂಬದಿ ಡಿಪಾಸಿಟರ್ ರವರ ಸಹಿ ಮಾಡಬೇಕಾಗಿದ್ದು ಬ್ಯಾಂಕಿನ ಸಾಮಾನ್ಯ ನಿಯಮ. ಅದರಂತೆ ತಾನು ದಿನಾಂಕ: 25/06/2013 ರಲ್ಲಿ ಚೆಕ್‌ಗಳ ನಗದೀಕರಣಕ್ಕಾಗಿ ಸಹಿ ಮಾಡಿರುತ್ತೇನೆ. ವಿನಃ ಅದು ಸಮಾಜ ಕಲ್ಯಾಣ ಇಲಾಖೆ ಕಛೇರಿ, ಶ್ರೀನಿವಾಸಪುರ ಇವರಿಂದ ಚೆಕ್‌ಗಳನ್ನು ಸ್ವೀಕರಿಸಿದ್ದೇನೆ ಎಂಬುವುದಕ್ಕೆ ಸ್ವೀಕೃತಿ ದಾಖಲೆಗಳು ಇರುವುದಿಲ್ಲ. ಚೆಕ್‌ಗಳನ್ನು ವಿತರಣೆ ಮಾಡಿದವರು, ಸದರಿ ಚೆಕ್‌ಗಳ ಕೌಂಟರ್ ಫೈಲ್ ಮೇಲೆ ಸಹಿ ಮಾಡಿಸಿಕೊಳ್ಳುವುದು ಸ್ವೀಕೃತಿಯಾಗುತ್ತದೆ ಅಥವಾ ಚೆಕ್ಕುಗಳು ವಿತರಣೆ ಮಾಡಿದ ಪುಸ್ತಕದಲ್ಲಿ ಚೆಕ್‌ಗಳ ನಂಬರ್, ಮೊಬಗಲು, ದಿನಾಂಕಗಳನ್ನು ದಾಖಲಿಸಿಕೊಂಡು ಸಹಿಯನ್ನು ಪಡೆಯಬೇಕಾಗುತ್ತದೆ. ಸದರಿ ತನಿಖಾಧಿಕಾರಿಗಳು ಇಂತಹ ಯಾವುದೇ ದಾಖಲೆಗಳನ್ನು ಸಂಗ್ರಹಿಸಿರುವುದಿಲ್ಲ. ಮುಂದುವರೆದು, ಸದರಿ ಚೆಕ್‌ಗಳನ್ನು ತಾನು ಬ್ಯಾಂಕಿಗೆ ಸಲ್ಲಿಸಬೇಕೆಂದು ಕಾಲೇಜಿನ ಅಂದಿನ ಗುಮಾಸ್ತ ಶ್ರೀ. ವೈ.ಆರ್ ಉಪೇಂದ್ರ ಇವರಿಗೆ ಸೂಚನೆ ಕೊಟ್ಟಿದ್ದು ಇರುತ್ತದೆ. ಸದರಿ ಗುಮಾಸ್ತರು ಆ ದಿನ ಚೆಕ್‌ಗಳನ್ನು ಬ್ಯಾಂಕಿಗೆ ಸಲ್ಲಿಸದೇ ತನ್ನ ಬಳಿ ಇಟ್ಟುಕೊಂಡು ದಿನಾಂಕ: 01/07/2013ಕ್ಕೆ ಅಂದರೆ ಚೆಕ್‌ಗಳ ಅವಧಿ ಮುಗಿದ ನಂತರ ಸಲ್ಲಿಸಿ, ಅದೇ ದಿನ ಬ್ಯಾಂಕಿನಿಂದ ಸದರಿ ಚೆಕ್‌ಗಳನ್ನು ವಾಪಸ್ಸು ಪಡೆದುಕೊಂಡು ಇವರ ಗಮನಕ್ಕೆ ತಂದಿರುವುದಿಲ್ಲ ಅಂತಾ ಹೇಳಿರುತ್ತಾರೆ. ನಂತರ ಇವರು ದಿನಾಂಕ: 27/08/2013 ರಿಂದ 06/09/2013 ರವರೆಗೆ ರಜೆಯಲ್ಲಿದ್ದಾಗ ದಿನಾಂಕ: 07/09/2013 ರಂದು ಕರ್ತವ್ಯಕ್ಕೆ ಹಾಜರಾಗಿದ್ದು, ಆಗ ಗುಮಾಸ್ತ ಇವರು ಒಂದು ಪತ್ರವನ್ನು ತಂದು ವಿದ್ಯಾರ್ಥಿಗಳ ಸ್ಕಾಲರ್‌ಶಿಪ್ ಬ್ಯಾಂಕಿನ ನಗದೀಕರಣಕ್ಕಾಗಿ ಸಲ್ಲಿಸಿದ ಚೆಕ್‌ಗಳು ನಗದೀಕರಣಗೊಳ್ಳದ ಕಾರಣ ಬ್ಯಾಂಕಿನವರು ಸದರಿ ಚೆಕ್‌ಗಳನ್ನು ಮರಳಿ ಕೊಟ್ಟಿದ್ದು, ಇವರು ರಜೆ ಮೇಲಿದ್ದ ಕಾರಣ ಪ್ರಭಾರದಲ್ಲಿದ್ದ ಪ್ರಾಂಶುಪಾಲರಾದ ಶ್ರೀ. ಡಿ. ಸೇವಾನಾಯಕ್ ರವರಿಂದ ಸದರಿ ಚೆಕ್‌ಗಳನ್ನು ನವೀಕರಣಕ್ಕಾಗಿ ಪತ್ರವನ್ನು ಸಿದ್ದಪಡಿಸಿ ಸಹಿ ಮಾಡಿಕೊಂಡು ಸಮಾಜ ಕಲ್ಯಾಣ ಇಲಾಖೆ ಕಛೇರಿಯಲ್ಲಿ ಕೊಟ್ಟುಬಂದಿದ್ದೇನೆ ಎಂದು ತಿಳಿಸಿ.

ಸದರಿ ಪತ್ರದ ನಕಲು ಪ್ರತಿಯನ್ನು ತನಗೆ ತೋರಿಸಿದ್ದು, ಅದು ಗುಮಾಸ್ತರವರ ಕೈಬರಹದಲ್ಲಿತ್ತು ಅಂತಾ ಹೇಳಿರುತ್ತಾರೆ. ನಂತರ ದಿನಾಂಕ: 28/10/2013 ರಲ್ಲಿ ಒಂದು ನೆನಪೋಲೆ ಪತ್ರವನ್ನು ಸಲ್ಲಿಸಿರುತ್ತೇನೆ ಅಂತಾ ಹೇಳಿರುತ್ತಾರೆ. ದಿನಾಂಕ: 02/12/2013 ರಂದು ಈ ಬಗ್ಗೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಇವರಿಗೆ ದೂರು ನೀಡಿರುತ್ತೇನೆ. ಅವರಿಂದ ಯಾವುದೇ ಉತ್ತರ ಬಾರದ ಕಾರಣ, ಧಿನಾಂಕ: 28/10/2014 ರಂದು ಕೋಲಾರ ಜಿಲ್ಲಾ ಲೋಕಾಯುಕ್ತ ಕಛೇರಿಯಲ್ಲಿ ದೂರನ್ನು ನೀಡಿರುತ್ತೇನೆ ಅಂತಾ ಹೇಳಿರುತ್ತಾರೆ. ನಂತರ ಶ್ರೀಮತಿ. ಶಾಂತಮ್ಮ, ಸಹಾಯಕ ಸಮಾಜ ಕಲ್ಯಾಣಾಧಿಕಾರಿಗಳು, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಇವರು ಉಪ ಖಜಾನೆ, ಶ್ರೀನಿವಾಸಪುರ ಇವರಿಗೆ ಸದರಿ ಚೆಕ್‌ಗಳ ನವೀಕರಣಕ್ಕೆ ದಿನಾಂಕ: 13/11/2014 ರಂದು ಸಲ್ಲಿಸಿರುತ್ತಾರೆ ಅಂತಾ ಹೇಳಿರುತ್ತಾರೆ. ಈ ಪ್ರಕರಣದಲ್ಲಿ ತನಿಖಾಧಿಕಾರಿಗಳು, ಬ್ಯಾಂಕಿನವರು ದಿನಾಂಕ: 16/09/2016ರ ಪತ್ರಕ್ಕೆ ಪೂರಕ ದಾಖಲೆಯನ್ನು ಅಂದರೆ ಸದರಿ ಚೆಕ್‌ಗಳನ್ನು ಬ್ಯಾಂಕಿನಿಂದ ವಾಪಸ್ಸು ಪಡೆದ ಬಗ್ಗೆ ಸಂಬಂಧಪಟ್ಟ ಪುಸ್ತಕದಲ್ಲಿ ಚೆಕ್‌ಗಳು ಸ್ವೀಕರಿಸಿದವರ ಸಹಿ ಇದ್ದ ದಾಖಲೆಯನ್ನು ಬ್ಯಾಂಕಿನಿಂದ ಸಂಗ್ರಹಿಸಿರುವುದಿಲ್ಲ. ಆದ್ದರಿಂದ, ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ಹೇಳಿರುತ್ತಾರೆ.

8. ಆ.ಸ.ನೌ–2 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ, ಶ್ರೀನಿವಾಸಪುರ ಇವರು ದಿನಾಂಕ: 30/03/2013ರಲ್ಲಿ ರೂ.44,670/– ಮತ್ತು ರೂ.26,936/–ಗಳ ಬಿಲ್ಲುಗಳನ್ನು ಸಲ್ಲಿಸಿದ್ದು, ಸದರಿ ಬಿಲ್ಲುಗಳಿಗೆ 2 ಚೆಕ್‌ಗಳನ್ನು ಸಹ ವಿತರಿಸಲಾಗಿತ್ತು. ಸದರಿ ಚೆಕ್‌ಗಳನ್ನು ಪಡೆದುಕೊಂಡ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ, ಶ್ರೀನಿವಾಸಪುರ ಇವರು ಆ.ಸ.ನೌ–1 ರವರಿಗೆ ನಗದೀಕರಣಕ್ಕಾಗಿ ನೀಡಿರುತ್ತಾರೆ. ಸದರಿ ಚೆಕ್‌ಗಳನ್ನು ಆ.ಸ.ನೌ–1 ರವರು ನಗದೀಕರಣ ಮಾಡಿಕೊಳ್ಳಬೇಕಾಗಿತ್ತು. ಸದರಿ ಚೆಕ್‌ಗಳ ಅವಧಿ ದಿನಾಂಕ: 29/03/2014ಕ್ಕೆ ಮುಕ್ತಾಯವಾಗಿರುತ್ತದೆ. ಈ ರೀತಿ ಖಜಾನೆಯಿಂದ ವಿತರಿಸಲಾದ 2 ಚೆಕ್‌ಗಳ ಅವಧಿ ಪೂರ್ಣಗೊಂಡ ನಂತರದಲ್ಲಿ ಅವಧಿ ಪೂರ್ಣಗೊಂಡ ಚೆಕ್‌ಗಳನ್ನು ನವೀಕರಿಸಲು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ, ಶ್ರೀನಿವಾಸಪುರ ದಿನಾಂಕ: 13/11/2014 ರಂದು ಶ್ರೀನಿವಾಸಪುರ ಉಪಖಜಾನೆಗೆ ಸಲ್ಲಿಸಿದ್ದು, ಸದರಿ ಚೆಕ್‌ಗಳನ್ನು ನವೀಕರಿಸಲು ದಿನಾಂಕ: 14/11/2014 ರಂದು

ಕೋಲಾರ ಜಿಲ್ಲಾ ಖಜಾನಾಧಿಕಾರಿಗಳಿಗೆ ಸಲ್ಲಿಸಲಾಗಿರುತ್ತದೆ. ಕೆ.ಎಫ್.ಸಿ ಅನುಚ್ಛೇದ ಕಲಂ 75ರ ಪ್ರಕಾರ ದಿನಾಂಕ: 30/03/2013 ರಂದು ನೀಡಿದ ಚೆಕ್‌ಗಳು ದಿನಾಂಕ: 29/03/2014ಕ್ಕೆ ಮುಕ್ತಾಯವಾಗಿರುತ್ತದೆ. ದಿನಾಂಕ: 13/11/2014 ರಂದು ಅಂದರೆ 1 ವರ್ಷ 11 ತಿಂಗಳ ಅವಧಿ ಕಳೆದ ನಂತರದಲ್ಲಿ ಉಪಖಜಾನೆಗೆ ಸಲ್ಲಿಸಿದ ಚೆಕ್‌ಗಳನ್ನು ಅದೇ ದಿನ ಕೋಲಾರ ಜಿಲ್ಲಾ ಖಜಾನೆಗೆ ನವೀಕರಣಕ್ಕಾಗಿ ಕಳುಹಿಸಿದ್ದು ಇರುತ್ತದೆ. ಸದರಿ ಅವಧಿಯಲ್ಲಿ ತಾನು ಪ್ರಭಾರ ಪತ್ರಾಂಕಿತ ಉಪಖಜಾನಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುವುದಿಲ್ಲ, ಬದಲಿಗೆ ಶ್ರೀ. ಸಿ. ಮುರಳೀಧರ್ ಇವರು ಪೂರ್ಣ ಪ್ರಮಾಣದ ಪತ್ರಾಂಕಿತ ಉಪಖಜನಾಧಿಕಾರಿಗಳು ಆಗಿರುತ್ತಾರೆ. ಅವಧಿ ಮುಗಿದ ಚೆಕ್‌ಗಳನ್ನು ಉಪಖಜಾನೆಗೆ ಸಲ್ಲಿಸಿದ ತಪ್ಪು ಸಮಾಜ ಕಲ್ಯಾಣಾಧಿಕಾರಿಗಳದ್ದು ಆಗಿರುತ್ತದೆ ಹೊರತು ಉಪಖಜಾನೆಯಿಂದ ಯಾವುದೇ ತಪ್ಪು ಆಗಿರುವುದಿಲ್ಲ ಅಂತಾ ಹೇಳಿರುತ್ತಾರೆ. ಆದ್ದರಿಂದ, ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ಹೇಳಿರುತ್ತಾರೆ.

9. ಈ ವಿಚಾರಣೆಯಲ್ಲಿ, ಆ.ಸ.ನೌ–1 ಮತ್ತು 2 ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ಶ್ರೀ. ಸಿ.ಎ ಸಿದ್ದಲಿಂಗಯ್ಯ, ಪೋಲಿಸ್ ನಿರೀಕ್ಷಕರು ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿದಿದ್ದು, ನಿ.ಪಿ.1 ರಿಂದ ನಿ.ಪಿ.6 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ–1 ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿದಿದ್ದು, ನಿ.ಡಿ.1 ರಿಂದ ನಿ.ಡಿ.14 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ–2 ರವರು ತಮ್ಮನ್ನು ಡಿ.ಡಬ್ಲ್ಯೂ.2 ಎಂದು ಸಾಕ್ಷ್ಯ ನುಡಿದಿದ್ದು, ನಿ.ಡಿ.15 ರಿಂದ ನಿ.ಡಿ.19 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ.

10. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

11. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

12. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

13. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ನಕಾರಾತ್ಮಕವಾಗಿ.**

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

14. ಈ ಪ್ರಕರಣದಲ್ಲಿ ಸದರಿ ದೂರನ್ನು ತನಿಖೆಗಾಗಿ ಈ ಸಂಸ್ಥೆಯಿಂದ ಪೋಲಿಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೋಲಾರ ಇವರಿಗೆ ವಹಿಸಿದ್ದು, ಸದರಿಯವರು ದೂರಿನ ತನಿಖೆಯನ್ನು ಕೈಗೊಳ್ಳಲು ಅವರ ಅಧೀನ ಅಧಿಕಾರಿಯಾದ ಶ್ರೀ. ಸಿ.ಎ ಸಿದ್ದಲಿಂಗಯ್ಯ, ಪೋಲಿಸ್ ನಿರೀಕ್ಷಕರು, ಕ.ಲೋ., ಕೋಲಾರ (ತನಿಖಾಧಿಕಾರಿಗಳು) ತನಿಖೆಯನ್ನು ಕೈಗೊಂಡು ಶ್ರೀ. ಎನ್ ರಾಮಚಂದ್ರಪ್ಪ (ಈಗಾಗಲೇ ದೂರನ್ನು ಸಲ್ಲಿಸಿದವರು) ಇವರು ಕರ್ತವ್ಯ ಲೋಪ ಎಸಗಿರುತ್ತಾರೆ ಹಾಗೂ ಒಬ್ಬ ಶ್ರೀ. ಮೊಹಮದ್ ರಫಿ ಅಹಮದ್, ಮುಖ್ಯ ಲೆಕ್ಕಿಗರು, ಖಜಾನೆ ಇಲಾಖೆ, ಹಿಂದಿನ ಉಪ ಖಜಾನಾಧಿಕಾರಿ, ಖಜಾನೆ ಇಲಾಖೆ ಇವರು ಸಹ ಕರ್ತವ್ಯ ಲೋಪ ಎಸಗಿರುತ್ತಾರೆ ಅಂತಾ ಇವರ ವಿರುದ್ಧ ವಿಚಾರಣೆಯನ್ನು ಕೈಗೊಳ್ಳಲು ಕಳುಹಿಸಿಕೊಟ್ಟಿರುತ್ತಾರೆ. ಆದ್ದರಿಂದ, ಈ ಪ್ರಕರಣದಲ್ಲಿ ತನಿಖಾಧಿಕಾರಿಗಳನ್ನು ದೂರುದಾರರಾಗಿ ಮಾಡಿಕೊಂಡಿದ್ದು ಇರುತ್ತದೆ. ತನಿಖಾಧಿಕಾರಿಗಳ ಪ್ರಕಾರ 1ನೇ ಆ.ಸ.ನೌ.ರ ಶ್ರೀ.ಎನ್.ರಾಮಚಂದ್ರಪ್ಪ,

ಪ್ರಾಂಶುಪಾಲರಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಗೌನಪಲ್ಲಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಗೌನಪಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಎಸ್.ಸಿ/ಎಸ್.ಟಿ. ವಿದ್ಯಾರ್ಥಿಗಳಿಗೆ ಮಂಜೂರಾಗಿದ್ದ ವಿದ್ಯಾರ್ಥಿ ವೇತನ ಶುಲ್ಕ 30–3–2013ರ ದಿನಾಂಕದ ಚೆಕ್‌ಗಳು ವಿತರಣೆಯಾಗಿದ್ದು, ಶ್ರೀ.ಎನ್.ರಾಮಚಂದ್ರಪ್ಪ ದಿ:25–6–2013 ರಂದು ಚೆಕ್‌ಗಳ ಹಿಂಭಾಗ ಸಹಿ ಮಾಡಿ ಸ್ವೀಕರಿಸಿ, ದಿ:01–07–2013 ರಂದು ಗೌನಪಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾಗೆ ಅವಧಿ ಮುಗಿದ ನಂತರ ನಗದೀಕರಣಕ್ಕೆ ಸಲ್ಲಿಸಿರುತ್ತಾರೆ. ಮುಂದುವರೆದು, ಚೆಕ್‌ಗಳ ನಗದೀಕರಣ ಅವಧಿ ದಿ:30–6–2013ಕ್ಕೆ ಮುಗಿದಿದ್ದ ಕಾರಣ ಬ್ಯಾಂಕಿನಿಂದ ಚೆಕ್‌ಗಳನ್ನು ಸ್ವೀಕರಿಸದೇ ವಾಪಸ್ಸು ನೀಡಿದ್ದು, 2012–13ನೇ ಸಾಲಿನ ಹಾಸ್ಟೆಲ್ ಎಸ್.ಸಿ/ಎಸ್.ಟಿ. ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಶುಲ್ಕಕ್ಕೆ ಸಂಬಂಧಿಸಿದ ಒಟ್ಟು ಮೊತ್ತ ರೂ.71,606/–ಗಳ ಎರಡು ಚೆಕ್‌ಗಳ ದಿನಾಂಕ ನವೀಕರಣಗೊಳ್ಳದೇ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಶುಲ್ಕ ಪಾವತಿಯಾಗದಿರುವುದು ಕಂಡುಬರುತ್ತದೆ.

15. 2ನೇ ಆ.ಸ.ನೌ.ರ ಶ್ರೀ.ಮಹಮ್ಮದ್ ರಫಿ ಅಹಮದ್ ರವರು ಪ್ರಭಾರ ಉಪ ಖಜಾನಾಧಿಕಾರಿಗಳಾಗಿ, ಶ್ರೀನಿವಾಸಪುರ, ಕೋಲಾರ ಜಿಲ್ಲೆ ಕರ್ತವ್ಯ ನಿರ್ವಹಿಸುತ್ತಿದ್ದಾಗ ಗೌನಪಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಚೆಕ್‌ಗಳ ದಿನಾಂಕಗಳನ್ನು ನವೀಕರಿಸಲು ದಿ:27–8–2013 ರಂದು ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರ ರವರಿಗೆ ಸಲ್ಲಿಸಿಕೊಂಡಿದ್ದು, ಅವರು ದಿ:16–12–2013 ರಂದು ನವೀಕರಣ ಸಲುವಾಗಿ ಚೆಕ್‌ಗಳನ್ನು ಶ್ರೀನಿವಾಸಪುರ ಉಪಖಜಾನೆಗೆ ಕಳುಹಿಸಿದ್ದರೂ ಸಹ ಚೆಕ್‌ಗಳ ದಿನಾಂಕ ನವೀಕರಣ ಮಾಡದೇ ಇದ್ದ ಕಾರಣ ಒಂದು ವರ್ಷಕ್ಕೆ ಮೇಲ್ಪಟ್ಟು ಬ್ಯಾಂಕಿನಲ್ಲಿ ಪಾವತಿಯಾಗದೇ ಇದ್ದು, ಸದರಿ ಚೆಕ್‌ಗಳನ್ನು ಜಿಲ್ಲಾ ಖಜಾನೆ, ಕೋಲಾರ ರವರ ಮುಖಾಂತರ ಮಹಾಲೇಖಪಾಲರು, ಬೆಂಗಳೂರು ರವರಿಗೆ ಸಲ್ಲಿಸಿದ್ದು ಇರುತ್ತದೆ ಅಂತಾ ಕಂಡುಬರುತ್ತದೆ ಅಂತಾ ವರದಿಯನ್ನು ಸಲ್ಲಿಸಿರುತ್ತಾರೆ.

16. ಶಿಸ್ತು ಪ್ರಾಧಿಕಾರದ ಪರವಾಗಿ ತನಿಖಾಧಿಕಾರಿಗಳನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 17/03/2016 ರಂದು ಪೋಲಿಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೋಲಾರ ಈ ಪ್ರಕರಣದಲ್ಲಿ ತನಿಖೆಯನ್ನು ಮಾಡಿ ವರದಿಯನ್ನು ಸಲ್ಲಿಸುವಂತೆ ಆದೇಶಿಸಿದ್ದು, ಅದರಂತೆ ದಿನಾಂಕ: 08/09/2016 ರಂದು ಹೆಚ್ಚಿನ ಮಾಹಿತಿಯನ್ನು ತಿಳಿಯುವ ಸಲುವಾಗಿ ದೂರುದಾರ/ಆ.ಸ.ನೌ–1 ಶ್ರೀ. ರಾಮಚಂದ್ರಪ್ಪ ರವರನ್ನು ಕರೆಸಿಕೊಂಡು ವಿಷಯವನ್ನು ತಿಳಿದುಕೊಂಡಿರುತ್ತೇನೆ ಅಂತಾ ನುಡಿದಿರುತ್ತಾರೆ.

17. ಅದೇ ದಿನ ಸಹಾಯಕ ಸಮಾಜ ಕಲ್ಯಾಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀಮತಿ. ಶಾಂತಮ್ಮ ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಶ್ರೀಮತಿ. ಶಾಂತಮ್ಮ ಇವರ ಹೇಳಿಕೆಯ ಪ್ರಕಾರ ದೂರುದಾರ/ಆ.ಸ.ನೌ–1 ರವರು ವಿದ್ಯಾರ್ಥಿ ವೇತನದ ಚೆಕ್‌ಗಳನ್ನು ನಗದೀಕರಣಕ್ಕಾಗಿ ಬ್ಯಾಂಕಿಗೆ ಸಲ್ಲಿಸಿಕೊಂಡಿದ್ದು, ನಗದೀಕರಣಗೊಳ್ಳದೇ ಚೆಕ್‌ಗಳು ಬ್ಯಾಂಕಿನಿಂದ ಮರಳಿ ಬಂದ ಕಾರಣ ಸದರಿಯವರು ಚೆಕ್‌ಗಳನ್ನು ಶ್ರೀನಿವಾಸಪುರದ ಸಮಾಜ ಕಲ್ಯಾಣ ಇಲಾಖೆಗೆ ಮರಳಿ ಕಳುಹಿಸಿದ್ದು ಇರುತ್ತದೆ. ಮುಂದುವರೆದು, ಸದರಿ ಚೆಕ್‌ಗಳನ್ನು ಶ್ರೀನಿವಾಸಪುರದ ಉಪಖಜನಾಧಿಕಾರಿಗಳಿಗೆ ಈ ಹಿಂದೆ ಇದ್ದ ಸಮಾಜ ಕಲ್ಯಾಣಾಧಿಕಾರಿ ಶ್ರೀ. ಕೆ.ಎಂ ರಾಮಸ್ವಾಮಿ ದಿನಾಂಕ: 16/12/2013 ರಂದು ಕಳುಹಿಸಿರುತ್ತಾರೆ. ಚೆಕ್‌ಗಳು ಸಮಾಜ ಕಲ್ಯಾಣ ಇಲಾಖೆಯಿಂದ ಮರಳಿ ಬಾರದ ಕಾರಣ ಆ.ಸ.ನೌ–1 ರವರು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಕೋಲಾರ ರವರಿಗೆ ದಿನಾಂಕ: 29/10/2014 ರಲ್ಲಿ ದೂರನ್ನು ಸಲ್ಲಿಸಿರುತ್ತಾರೆ. ಸದರಿ ಚೆಕ್‌ಗಳು ಆ.ಸ.ನೌ–1 ರವರು ದಿನಾಂಕ: 14/11/2014 ರಂತೆ ಕಾಲಕ್ಕೆ ಸರಿಯಾಗಿ ಬ್ಯಾಂಕಿಗೆ ಜಮಾ ಮಾಡದ ಕಾರಣ, ಚೆಕ್‌ಗಳು ನಗದೀಕರಣಗೊಂಡಿರುವುದಿಲ್ಲ ಅಂತಾ ನಮೂದಿಸಿರುತ್ತಾರೆ.

18. ಮುಂದುವರೆದು, ಪಿ.ಡಬ್ಲ್ಯೂ.1 ಇವರು ತನಿಖಾ ವೇಳೆಯಲ್ಲಿ ಗೌಪ್ಯವಾಗಿ ಮಾಹಿತಿಯನ್ನು ಪಡೆಯಲಾಗಿ, ಆ.ಸ.ನೌ–1 ರವರು ಕರ್ತವ್ಯ ನಿರ್ವಹಿಸುತ್ತಿದ್ದ ಕಾಲೇಜಿಗೆ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಮಂಜೂರಾಗಿದ್ದ ಚೆಕ್‌ಗಳನ್ನು ದಿನಾಂಕ: 30/03/2013 ರಂದು ನಮೂದಿಸಿ

ಕಾಲೇಜಿಗೆ ವಿತರಿಸಿದ್ದು, ಆ.ಸ.ನೌ–1 ರವರು ಕಾಲೇಜಿನ ಪ್ರಾಂಶುಪಾಲರಾಗಿದ್ದು, ಚೆಕ್‌ಗಳನ್ನು ದಿನಾಂಕ: 25/06/2013 ರಂದು ಹಿಂಭಾಗದಲ್ಲಿ ಸಹಿ ಮಾಡಿ ಸ್ವೀಕರಿಸಿರುತ್ತಾರೆ. ದಿನಾಂಕ: 01/07/2013 ರಂದು ಆ.ಸ.ನೌ–1 ರವರು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾಗೆ ನಗದೀಕರಣಕ್ಕೆ ಸಲ್ಲಿಸಿದ್ದು, ಬ್ಯಾಂಕಿನವರು ಈಗಾಗಲೇ 3 ತಿಂಗಳ ಅವಧಿ ಮೀರಿರುವುದರಿಂದ ಅದನ್ನು ಸ್ವೀಕರಿಸಲು ಬರುವುದಿಲ್ಲ ಅಂತಾ ಮರಳಿ ಕಳುಹಿಸಿರುತ್ತಾರೆ. ನಂತರ ದಿನಾಂಕ: 27/08/2013 ರಂದು ಆ.ಸ.ನೌ–1 ರವರು ಚೆಕ್‌ನ ದಿನಾಂಕವನ್ನು ನವೀಕರಿಸಲು ಸಮಾಜ ಕಲ್ಯಾಣ ಇಲಾಖೆಗೆ ಕೋರಿಕೆ ಪತ್ರವನ್ನು ನೀಡಿರುತ್ತಾರೆ ಅಂತಾ ನುಡಿದಿರುತ್ತಾರೆ.

19. ಮುಂದುವರೆದು, ಪಿ.ಡಬ್ಲ್ಯೂ.1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 16/12/2013 ರಂದು ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ಶ್ರೀ. ಕೆ.ಎನ್ ರಾಮಸ್ವಾಮಿ ಇವರು ಶ್ರೀನಿವಾಸಪುರದ ಉಪಖಜಾನೆಗೆ ಚೆಕ್‌ಗಳ ನವೀಕರಣಕ್ಕಾಗಿ ಪತ್ರ ವ್ಯವಹಾರ ನಡೆಸಿದ್ದು ಕಂಡುಬರುತ್ತದೆ. ತಾಲ್ಲೂಕು ಉಪಖಜಾನೆಯಲ್ಲಿ ಖಜಾನೆ ಅಧಿಕಾರಿಗಳು ಆದ ಆ.ಸ.ನೌ–2 ರವರು ಹಾಗೂ ಆ.ಸ.ನೌ–1 ರವರುಗಳ ಬೇಜಬ್ದಾರಿತನದಿಂದ ಚೆಕ್‌ಗಳನ್ನು ಸರಿಯಾದ ಸಮಯದಲ್ಲಿ ನವೀಕರಣಗೊಳಿಸದೇ ವಿದ್ಯಾರ್ಥಿಗಳಿಗೆ ಪಾವತಿಯಾಗದಿರುವುದು ಕಂಡುಬರುತ್ತದೆ ಅಂತಾ ನುಡಿದಿರುತ್ತಾರೆ. ಈ ಬಗ್ಗೆ ಇವರು ಶ್ರೀಮತಿ. ಶಾಂತಮ್ಮ ಇವರ ಹೇಳಿಕೆಯನ್ನು ನಿ.ಪಿ.1 ಎಂದು; ಶ್ರೀ. ಕೆ.ಎನ್ ರಾಮಸ್ವಾಮಿ ಇವರ ಹೇಳಿಕೆಯನ್ನು ನಿ.ಪಿ.2 ಎಂದು; ಆ.ಸ.ನೌ–2 ರವರ ಹೇಳಿಕೆಯನ್ನು ನಿ.ಪಿ.3 ಎಂದು; ಗೌನಪಲ್ಲಿಯ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಥಮ ದರ್ಜೆ ಸಹಾಯಕ ಶ್ರೀ. ವೈ.ಆರ್ ಉಪೇಂದ್ರ ಇವರ ಹೇಳಿಕೆಯನ್ನು ನಿ.ಪಿ.4 ಎಂದು; ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ನಿ.ಪಿ.5 ಎಂದು ಮತ್ತು ತನಿಖಾಧಿಕಾರಿಗಳು (ಪಿ.ಡಬ್ಲ್ಯೂ.1) ನೀಡಿದ ವರದಿಯನ್ನು ನಿ.ಪಿ.6 ಎಂದು ಗುರುತಿಸಿಕೊಳ್ಳಲಾಗಿದೆ.

20. ಆ.ಸ.ನೌ–1 ರವರು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ಅವರು ನಿ.ಡಿ.1 ರಿಂದ ನಿ.ಡಿ.14 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 05/07/2011 ರಿಂದ 30/04/2014 ರವರೆಗೆ ಗೌನಪಲ್ಲಿಯ ಸರ್ಕಾರಿ

ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರೆಂದು ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿರುತ್ತಾರೆ ಅಂತಾ ನುಡಿದಿರುತ್ತಾರೆ. ದಿನಾಂಕ: 25/06/2013 ರಂದು ಕಾಲೇಜಿನ ಗುಮಾಸ್ತರಾದ ಶ್ರೀ. ವೈ.ಆರ್ ಉಪೇಂದ್ರ ಇವರು ಆ.ಸ.ನೌ–1 ಇವರ ಮುಂದೆ ಚೆಕ್‌ಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಪರಿಶೀಲಿಸಿ ನಗದೀಕರಿಸಕೊಳ್ಳಲು ಕೇವಲ 5 ದಿನ ಬಾಕಿ ಇದ್ದಿದ್ದು ಕಂಡುಬಂದಿದ್ದು, ಅದೇ ದಿನ ಬ್ಯಾಂಕಿಗೆ ನಗದಿಗಾಗಿ ಹಾಜರುಪಡಿಸಬೇಕೆಂದು ಉಪೇಂದ್ರ ಇವರಿಗೆ ಸೂಚಿಸಿ, ಆ ಚೆಕ್‌ಗಳ ಹಿಂಭಾಗದಲ್ಲಿ ತನ್ನ ಸಹಿಯನ್ನು ಹಾಕಿಕೊಟ್ಟಿದ್ದೆ ಅಂತಾ ನುಡಿದಿರುತ್ತಾರೆ. ನಂತರ 5–6 ಬಾರಿ ಸದರಿ ಚೆಕ್‌ಗಳ ಬಗ್ಗೆ ಉಪೇಂದ್ರ ರವರನ್ನು ಕೇಳಿದಾಗ ಸದರಿ ಚೆಕ್‌ಗಳು ಇನ್ನು ನಗದೀಕರಣಗೊಂಡಿರುವುದಿಲ್ಲ ಅಂತಾ ನುಡಿದಿರುತ್ತಾರೆ.

21. ಮುಂದುವರೆದು, ಆ.ಸ.ನೌ–1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 27/08/2013 ರಿಂದ 06/09/2013 ರವರೆಗೆ ಆ.ಸ.ನೌ–1 ಇವರು ಪರಿವರ್ತಿತ ರಜೆಯನ್ನು ಪಡೆದುಕೊಂಡಿದ್ದು, ಕರ್ತವ್ಯಕ್ಕೆ ಪುನಃ ಹಾಜರಾದಾಗ ದಿನಾಂಕ: 27/08/2013 ರಂದು ಪ್ರಭಾರ ಪ್ರಾಂಶುಪಾಲರಾಗಿದ್ದ ಶ್ರೀ. ಡಿ. ಸೇವಾನಾಯಕ್ ರವರು ಮೇಲ್ಕಂಡ 2 ಚೆಕ್‌ಗಳು ನಗದಾಗಿರುವುದಿಲ್ಲ, ಹೀಗಾಗಿ ನವೀಕರಣಕ್ಕಾಗಿ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಶ್ರೀನಿವಾಸಪುರಕ್ಕೆ ತಾನೇ ಕೊಟ್ಟು ಬಂದಿರುತ್ತೇನೆ ಅಂತಾ ತಿಳಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ನಂತರ ದಿನಾಂಕ: 28/08/2013 ರಂದು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಶ್ರೀನಿವಾಸಪುರ ಇವರಿಗೆ ನೆನಪೋಲೆಯನ್ನು ಕಳುಹಿಸಿದ್ದು, ಅವರಿಂದ ಉತ್ತರ ಬಾರದ ಕಾರಣ ದಿನಾಂಕ: 02/12/2013 ರಂದು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಕೋಲಾರ ಇವರು ಚೆಕ್‌ಗಳನ್ನು ನವೀಕರಿಸಿಕೊಡಬೇಕೆಂದು ಪತ್ರವನ್ನು ಬರೆದಿರುವುದಾಗಿ ತಿಳಿಸಿರುತ್ತಾರೆ. ದಿನಾಂಕ: 28/10/2014 ರಂದು ಪೋಲಿಸ್ ಅಧೀಕ್ಷಕರು, ಕ.ಲೋ., ಕೋಲಾರ ಇವರಿಗೆ ದೂರನ್ನು ಸಲ್ಲಿಸಿ, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಶ್ರೀನಿವಾಸಪುರ ಇವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಂಡಿರುತ್ತೇನೆ ಅಂತಾ ನುಡಿದಿರುತ್ತಾರೆ.

22.ಮುಂದುವರೆದು, ತಮ್ಮ ಸಾಕ್ಷಿಯಲ್ಲಿ ದಿನಾಂಕ: 07/11/2014 ರಂದು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಕೋಲಾರ ಇವರು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಶ್ರೀನಿವಾಸಪುರ ಇವರಿಗೆ ಒಂದು ಪತ್ರವನ್ನು ಬರೆದು ದಿನಾಂಕ: 15/11/2014 ರೊಳಗೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿರುತ್ತಾರೆ. ಮುಂದುವರೆದು, ವೈ.ಆರ್ ಉಪೇಂದ್ರ ಇವರು ತಮಗೆ ತಪ್ಪು ಮಾಹಿತಿಯನ್ನು ಕೊಟ್ಟು ಮೋಸ ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ. ಆದ್ದರಿಂದ, ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ನುಡಿದಿರುತ್ತಾರೆ.

23.ಆ.ಸ.ನೌ–2 ರವರು ಡಿ.ಡಬ್ಲ್ಯೂ.2 ಎಂದು ಸಾಕ್ಷಿ ನುಡಿದಿದ್ದು, ಅವರು ನಿ.ಡಿ.15 ರಿಂದ ನಿ.ಡಿ.19 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ದಿನಾಂಕ: 12/04/2014 ರಿಂದ 31/10/2018 ರವರೆಗೆ ಶ್ರೀನಿವಾಸಪುರ ಉಪಖಜಾನೆಯಲ್ಲಿ ಮುಖ್ಯಲೆಕ್ಕಿಗನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಆ ವೇಳೆಯಲ್ಲಿ ಪತ್ರಾಂಕಿತ ಉಪ ಖಜಾನೆ ಅಧಿಕಾರಿಯಾಗಿ ಶ್ರೀ. ಮುರಳೀಧರ್ ಎಂಬುವವರು ಕರ್ತವ್ಯ ನಿರ್ವಹಿಸುತ್ತಿದ್ದರು. ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಶ್ರೀನಿವಾಸಪುರ ಇವರು ದಿನಾಂಕ: 13/11/2014 ರಂದು ಉಪಖಜಾನೆ ಅಧಿಕಾರಿಗಳಿಗೆ ಸದರಿ ಚೆಕ್‌ಗಳನ್ನು ಪುನಃ ನವೀಕರಿಸಬೇಕೆಂದು ಅರ್ಜಿಯನ್ನು ಸಲ್ಲಿಸಿದ್ದು, ಇವರು ಕೊಟ್ಟಂತಹ ಚೆಕ್‌ಗಳು ನಗದೀಕರಣಗೊಳಿಸಿಕೊಂಡಿರಲಿಲ್ಲ, ಸದರಿ ಚೆಕ್‌ಗಳನ್ನು 90 ದಿನಗಳ ಒಳಗಾಗಿ ನಗದೀಕರಣಕ್ಕಾಗಿ ಸಲ್ಲಿಸಬೇಕಾಗಿತ್ತು. ನಂತರ ಉಪಖಜಾನೆ ಅಧಿಕಾರಿಗಳು ಜಿಲ್ಲಾ ಉಪಖಜಾನೆ ಅಧಿಕಾರಿಗಳಿಗೆ ದಿನಾಂಕ: 14/11/2014 ರಂದು ಒಂದು ಪತ್ರವನ್ನು ಬರೆದು ಚೆಕ್‌ಗಳನ್ನು ನವೀಕರಿಸಲು ಕೋರಿದ್ದು ಇರುತ್ತದೆ. ಸದರಿ ಚೆಕ್‌ಗಳನ್ನು ತಾನು ವಿತರಿಸಿರುವುದಿಲ್ಲ, ಉಪಖಜಾನಾಧಿಕಾರಿಗಳಾಗಿದ್ದ ಶ್ರೀ. ಮುರಳೀಧರ್ ರವರು ವಿತರಿಸಿದ್ದು, ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ಹೇಳಿರುತ್ತಾರೆ.

24.ಈ ವಿಚಾರಣೆಯಲ್ಲಿ ಪಿ.ಡಬ್ಲ್ಯೂ.1 ಇವರ ಪಾಟಿಸವಾಲಿನಲ್ಲಿ ಆ.ಸ.ನೌ–1 ರವರು ವಿವಾದಾಸ್ಪದ ಚೆಕ್‌ಗಳ ನಕಲು ಪ್ರತಿಗಳನ್ನು ಹಾಜರುಪಡಿಸಿ, ಅವು 2 ಚೆಕ್‌ಗಳು ಇದ್ದು, ಅವುಗಳನ್ನು ನಿ.ಡಿ.1 ಮತ್ತು ನಿ.ಡಿ.2 ಅಂತಾ ಗುರುತಿಸಲಾಗಿರುತ್ತದೆ. ಅವುಗಳ ಮೊತ್ತ ರೂ.26,936/– ಹಾಗೂ ರೂ.44,670/– ಗಳಾಗಿದ್ದು, ಅವುಗಳನ್ನು ಪತ್ರಾಂಕಿತ ಅಧಿಕಾರಿಗಳು, ಶ್ರೀನಿವಾಸಪುರ ಇವರು ಪ್ರಾಂಶುಪಾಲರು, ಗೌನಪಲ್ಲಿಯ ಸರ್ಕಾರಿ ಪದವಿಪೂರ್ವ ಕಾಲೇಜಿನ ಹೆಸರನ್ನು ನಮೂದಿಸಿ ಚೆಕ್‌ಗಳನ್ನು ನೀಡಿದ್ದು ಕಂಡುಬರುತ್ತದೆ. ಸದರಿ ಚೆಕ್‌ಗಳಲ್ಲಿ ಚೆಕ್‌ನ ದಿನಾಂಕ: 30/03/2013 ಅಂತಾ ನಮೂದು ಆಗಿದ್ದು ಇರುತ್ತದೆ. ಈ ಚೆಕ್‌ಗಳ ಹಿಂಭಾಗದಲ್ಲಿ ದಿನಾಂಕ: 25/06/2013 ರಂದು ಆ.ಸ.ನೌ–1 ರವರ ಸಹಿ ಮತ್ತು ಸೀಲು ಇರುತ್ತದೆ. ಈ ಚೆಕ್‌ಗಳನ್ನು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾಗೆ ಸಲ್ಲಿಸಿದ್ದು ಇರುತ್ತದೆ, ಆದರೆ ಸದರಿ ಬ್ಯಾಂಕಿನ ಮ್ಯಾನೇಜರ್ ಇವರ ಸಹಿ ಇದ್ದು, ಪಡೆದುಕೊಂಡ ದಿನಾಂಕ ನಮೂದು ಇರುವುದಿಲ್ಲ. ಈ ಬಗ್ಗೆ ಪಿ.ಡಬ್ಲ್ಯೂ.1 ಇವರನ್ನು ಪಾಟಿಸವಾಲಿನಲ್ಲಿ ಸದರಿ ಚೆಕ್‌ನ ಹಿಂಭಾಗದಲ್ಲಿ ಬ್ಯಾಂಕಿನವರು ದಿನಾಂಕವನ್ನು ನಮೂದಿಸಿರುವುದಿಲ್ಲ ಎನ್ನುವುದಕ್ಕೆ ಸಾಕ್ಷಿಯು ಒಪ್ಪಿಕೊಂಡಿದ್ದು ಇರುತ್ತದೆ. ಪಿ.ಡಬ್ಲ್ಯೂ.1 ಇವರು ಸ್ವಇಚ್ಛೆಯಿಂದ ಈ ವಿಷಯದ ಬಗ್ಗೆ ಹೆಚ್ಚಿನ ವಿಷಯವನ್ನು ಹೇಳಿದ್ದು, ಅವರ ಪ್ರಕಾರ ಬ್ಯಾಂಕಿನವರು ಇವರಿಗೆ ಒಂದು ಪತ್ರವನ್ನು ಕೊಟ್ಟಿದ್ದು, ಸದರಿ ಪತ್ರದಲ್ಲಿ ದಿನಾಂಕ: 01/07/2013 ರಲ್ಲಿ ಚೆಕ್‌ಗಳನ್ನು ಸಲ್ಲಿಸಿರುವುದರಿಂದ ಅವುಗಳನ್ನು ನಗದೀಕರಣಗೊಳಿಸಲು ಆಗುವುದಿಲ್ಲ ಎಂದು ತಿಳಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ಈ ವಿಷಯದ ಬಗ್ಗೆ ಪಿ.ಡಬ್ಲ್ಯೂ.1 ಇವರು ನಿ.ಪಿ.5 ರಡಿಯಲ್ಲಿ 10 ದಾಖಲಾತಿಗಳನ್ನು ಸಲ್ಲಿಸಿದ್ದು, ಅದರಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದವರು ದಿನಾಂಕ: 16/09/2016 ರಂದು ಪಿ.ಡಬ್ಲ್ಯೂ.1 ರವರಿಗೆ ಒಂದು ಪತ್ರವನ್ನು ಬರೆದುಕೊಂಡಿದ್ದು, ಅದರಲ್ಲಿ ಸದರಿ ಚೆಕ್‌ಗಳನ್ನು ದಿನಾಂಕ: 01/07/2013 ರಂದು ಬ್ಯಾಂಕಿಗೆ ತಂದು ಸಲ್ಲಿಸಿದ್ದು, ಅವುಗಳ ದಿನಾಂಕವನ್ನು ಮುಗಿದು ಹೋಗಿದ್ದರಿಂದ, ಚೆಕ್‌ಗಳನ್ನು ವಾಪಸ್ ಕಳುಹಿಸಲಾಗಿರುತ್ತದೆ ಅಂತಾ ನಮೂದು ಇರುತ್ತದೆ.

25.ಆ.ಸ.ನೌ–1 ಇವರ ಪ್ರಕಾರ ಸದರಿ ಚೆಕ್‌ಗಳನ್ನು ತಾನು ದಿನಾಂಕ: 25/06/2013 ರಂದೇ ಬ್ಯಾಂಕಿಗೆ ನಗದೀಕರಣಗೊಳಿಸಬೇಕೆಂದು ತಮ್ಮ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ.

ವೈ.ಆರ್ ಉಪೇಂದ್ರ, ಪ್ರ.ದ.ಸ ಇವರಿಗೆ ಹೇಳಿದ್ದು, ಆದರೆ ಅವರು ಚೆಕ್‌ಗಳನ್ನು ಯಾವ ದಿನಾಂಕದಂದು ಹಾಜರುಪಡಿಸಿರುತ್ತಾರೆ ಅಂತಾ ತನಗೆ ತಿಳಿಸಿಲ್ಲವೆಂದು ವಾದ ಇರುತ್ತದೆ. ಈ ವಿಚಾರಣೆಯಲ್ಲಿ ಪಿ.ಡಬ್ಲ್ಯೂ.1 ಇವರು ಸದರಿ ವೈ.ಆರ್ ಉಪೇಂದ್ರ ರವರ ಹೇಳಿಕೆಯನ್ನು ಬರೆದುಕೊಂಡಿದ್ದು, ಸದರಿ ಹೇಳಿಕೆಯನ್ನು ನಿ.ಪಿ.4 ಅಂತಾ ಗುರುತಿಸಲಾಗಿರುತ್ತದೆ. ವೈ.ಅರ್ ಉಪೇಂದ್ರ ಇವರು ತಮ್ಮ ಹೇಳಿಕೆಯಲ್ಲಿ ಪ್ರಾಂಶುಪಾಲರು ಚೆಕ್‌ಗಳನ್ನು ಪಡೆದುಕೊಂಡು, ಬ್ಯಾಂಕಿಗೆ ನಗದೀಕರಣಕ್ಕೆ ಸಲ್ಲಿಸಿಕೊಂಡಿದ್ದು, ದಿನಾಂಕ ಮುಗಿದಿದೆ ಎಂದು ನಗದೀಕರಣಗೊಳ್ಳದೇ ಬ್ಯಾಂಕಿನಿಂದ ವಾಪಸ್ ಬಂದ ಕಾರಣ ಪ್ರಾಂಶುಪಾಲರು ಸದರಿ ಚೆಕ್‌ಗಳನ್ನು ಮರಳಿ ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಿಕೊಂಡಿರುತ್ತಾರೆ ಅಂತಾ ಹೇಳಿರುತ್ತಾರೆ. ಆದರೆ, ತನಿಖಾಧಿಕಾರಿಗಳು (ಪಿ.ಡಬ್ಲ್ಯೂ.1) ಬ್ಯಾಂಕಿನಿಂದ ಚೆಕ್‌ಗಳು ಮರಳಿ ಬಂದ ನಂತರ ಅವು ಯಾರ ಸ್ವಾಧೀನದಲ್ಲಿದ್ದವು ಎನ್ನುವ ಬಗ್ಗೆ ಯಾವುದೇ ವಿಚಾರಣೆಯನ್ನು ಮಾಡಿರುವುದಿಲ್ಲ. ತನಿಖಾಧಿಕಾರಿಗಳು, ಕಾಲೇಜಿನಲ್ಲಿರುವ ಸ್ವೀಕೃತಿ/ರವಾನೆ ರಿಜಿಸ್ಟರ್ (inward/outward register)ನ್ನು ಪಡೆದುಕೊಂಡಿರುವುದಿಲ್ಲ. ಒಂದು ವೇಳೆ ತನಿಖಾಧಿಕಾರಿಗಳು ಸ್ವೀಕೃತಿ/ರವಾನೆ ರಿಜಿಸ್ಟರ್ (inward/outward register)ನ್ನು ಪಡೆದುಕೊಂಡಿದ್ದೇ ಆದರೆ ಸದರಿ ಚೆಕ್‌ಗಳು ಖಜಾನೆಯಿಂದ ಯಾವಾಗ ಬಂದಿರುತ್ತದೆ ಮತ್ತು ನಗದೀಕರಣಕ್ಕೆ ಯಾವ ದಿನಾಂಕದಂದು ಸಲ್ಲಿಸಲಾಗಿರುತ್ತದೆ ಮತ್ತು ಬ್ಯಾಂಕಿನಿಂದ ಯಾವಾಗ ಮರಳಿ ಬಂದಿರುತ್ತದೆ ಅಂತಾ ಸ್ಪಷ್ಟವಾಗುತ್ತಿತ್ತು. ಈ ವಿಷಯದ ಬಗ್ಗೆ ತನಿಖಾಧಿಕಾರಿಗಳು, ವೈ.ಆರ್ ಉಪೇಂದ್ರ ಇವರಿಂದ ಯಾವುದೇ ಮಾಹಿತಿಯನ್ನು ಪಡೆದುಕೊಂಡಿರುವುದಿಲ್ಲ.

26.ಆ.ಸ.ನೌ–1 ರವರ ಪ್ರಕಾರ ತಾನು ದಿನಾಂಕ: 27/08/2013 ರಿಂದ 06/09/2013 ರವರೆಗೆ ಪರಿವರ್ತಿತ ರಜೆಯನ್ನು ಪಡೆದುಕೊಂಡಿದ್ದು, ಆ ವೇಳೆಯಲ್ಲಿ ವೈ.ಆರ್ ಉಪೇಂದ್ರ ಇವರು ಪ್ರಭಾರಿ ಇದ್ದ ಪ್ರಾಂಶುಪಾಲರು ಶ್ರೀ. ಡಿ. ಸೇವಾನಾಯಕ್ ಇವರಿಂದ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಗೆ ಒಂದು ಪತ್ರವನ್ನು ಬರೆದು ಚೆಕ್‌ಗಳನ್ನು ನವೀಕರಣಕ್ಕಾಗಿ ಕಳುಹಿಸಿ ಕೊಡಲಾಗಿರುತ್ತದೆ ಅಂತಾ ನುಡಿದಿರುತ್ತಾರೆ. ಈ ಬಗ್ಗೆ ತಮ್ಮ ಹಾಜರಾತಿ ಪುಸ್ತಕವನ್ನು

ಹಾಜರುಪಡಿಸಿದ್ದು, ಅದನ್ನು ನಿ.ಡಿ.14 ಎಂದು ಗುರುತಿಸಲಾಗಿದ್ದು, ಇದರ ಪ್ರಕಾರ ಇವರು ಪರಿವರ್ತಿತ ರಜೆಯನ್ನು ಪಡೆದುಕೊಂಡಿದ್ದು ಕಂಡುಬರುತ್ತದೆ. ಪ್ರಭಾರಿ ಪ್ರಾಂಶುಪಾಲರು, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಶ್ರೀನಿವಾಸಪುರ ಇವರಿಗೆ ಬರೆದುಕೊಂಡ ಪತ್ರವನ್ನು ನಿ.ಪಿ.5ರಲ್ಲಿ ಗುರುತಿಸಿಕೊಂಡಿದ್ದು ಇರುತ್ತದೆ. ಸದರಿ ಪತ್ರದ ಪ್ರಕಾರ ಈ 2 ಚೆಕ್‌ಗಳ ದಿನಾಂಕ ಮುಗಿದಿರುವುದರಿಂದ ಪುನರಾವರ್ತಿಸಿ ಕೊಡಬೇಕೆಂದು ಕೇಳಿಕೊಂಡಿದ್ದು ಇರುತ್ತದೆ. ನಿ.ಪಿ.1 ಇದು ಶ್ರೀಮತಿ. ಶಾಂತಮ್ಮ, ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರ ಇವರು ತನಿಖಾಧಿಕಾರಿಗಳ ಮುಂದೆ ಒಂದು ಹೇಳಿಕೆಯನ್ನು ನೀಡಿದ್ದು, ಸದರಿ ಹೇಳಿಕೆಯಲ್ಲಿ ನಗದೀಕರಣಗೊಳ್ಳದೇ ಬ್ಯಾಂಕಿನಿಂದ ವಾಪಸ್ ಬಂದ ಕಾರಣ ರಾಮಚಂದ್ರಪ್ಪ (ಆ.ಸ.ನೌ–1) ರವರು ಸದರಿ ಚೆಕ್‌ಗಳನ್ನು ಶ್ರೀನಿವಾಸಪುರದ ಸಮಾಜ ಕಲ್ಯಾಣ ಇಲಾಖೆಗೆ ಮರಳಿ ಕಳುಹಿಸಿದ್ದು ಇರುತ್ತದೆ ಅಂತಾ ಹೇಳಿರುತ್ತಾರೆ. ಈ ಹೇಳಿಕೆಯನ್ನು ಪರಿಶೀಲಿಸಿದಾಗ, ದಿನಾಂಕ: 27/08/2013 ರಂದು ಪ್ರಭಾರ ಪ್ರಾಂಶುಪಾಲರಾದ ಶ್ರೀ. ಡಿ. ಸೇವಾನಾಯಕ್ ಇವರು ಮೇಲೆ ಹೇಳಿದ ಹಾಗೆ ಪತ್ರವನ್ನು ಬರೆದುಕೊಂಡಿದ್ದು, ಅದರೆ ಜೊತೆಗೆ ಚೆಕ್‌ಗಳನ್ನು ಸಹ ಕಳುಹಿಸಿಕೊಟ್ಟಿದ್ದು ಇರುತ್ತದೆ ಅಂತಾ ನಿ.ಪಿ.4 ರಂತೆ ಕಂಡುಬರುತ್ತದೆ. ಅಂದರೆ ದಿನಾಂಕ: 01/07/2013 ರಿಂದ 27/08/2013 ರವರೆಗೆ ಸದರಿ ಚೆಕ್‌ಗಳು ಶ್ರೀ. ವೈ.ಆರ್ ಉಪೇಂದ್ರ ಇವರ ಹತ್ತಿರ ಇದ್ದವು ಅಂತಾ ಕಂಡುಬರುತ್ತದೆ. ಒಂದು ವೇಳೆ ಇವರ ಹತ್ತಿರ ಇಲ್ಲದಿದ್ದರೆ ದಿನಾಂಕ: 27/08/2013ರ ಪತ್ರದಲ್ಲಿ ಚೆಕ್‌ಗಳನ್ನು ಕಳುಹಿಸಿಕೊಟ್ಟ ಬಗ್ಗೆ ನಮೂದು ಇರುತ್ತಿರಲಿಲ್ಲ. ಚೆಕ್‌ಗಳು ಯಾರ ಹತ್ತಿರ ಇದ್ದವು ಎಂಬುದರ ಬಗ್ಗೆ ತನಿಖಾಧಿಕಾರಿಗಳು ಯಾವುದೇ ತನಿಖೆಯನ್ನು ಕೈಗೊಂಡಿರುವುದಿಲ್ಲ. ತನಿಖಾಧಿಕಾರಿಗಳು ಆ.ಸ.ನೌ–1 ಇವರ ಪಾಟಿಸವಾಲಿನಲ್ಲಿ ತನಿಖಾ ವೇಳೆಯಲ್ಲಿ ಚೆಕ್‌ಗಳನ್ನು ಸ್ವೀಕೃತಿಗೊಂಡ ಬಗ್ಗೆ ಸಂಬಂಧಪಟ್ಟ ರಿಜಿಸ್ಟರ್ ಅನ್ನು ನೋಡಿರುತ್ತೇನೆ ಅಂತಾ ಹೇಳಿದ್ದು, ಆದರೆ ಅದನ್ನು ಜಪ್ತಿ ಮಾಡಿರುವುದಿಲ್ಲ. ಸದರಿ ರಿಜಿಸ್ಟರ್‌ನ್ನು ಏಕೆ ಜಪ್ತಿ ಮಾಡಿಕೊಂಡಿರುವುದಿಲ್ಲ ಅಥವಾ ಸಂಬಂಧಪಟ್ಟ ಹಾಳೆಗಳ ದೃಢೀಕೃತ ನಕಲನ್ನು ಪಡೆಯಲು ಏಕೆ ಸಾಧ್ಯವಾಗಿರುವುದಿಲ್ಲ ಎನ್ನುವ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ.

27. ಮುಂದುವರೆದು, ಪಿ.ಡಬ್ಲ್ಯೂ.1 ಇವರ ಪಾಟಿಸವಾಲಿನಲ್ಲಿ ಆ.ಸ.ನೌ–1 ಇವರು ತನಿಖಾ ಕಾಲದಲ್ಲಿ ಅಸಲಿ ಚೆಕ್‌ಗಳು ಮಹಾಲೇಖಪಾಲಕರು, ಬೆಂಗಳೂರು ರವರಲ್ಲಿಗೆ ತಲುಪಿರುತ್ತದೆ ಅಂತಾ ತಿಳಿದು ಬಂದಿದ್ದು, ಇವತ್ತಿಗೂ ಸಹ ಆ 2 ಅಸಲಿ ಚೆಕ್‌ಗಳು ಉಪಖಜಾನೆ ಶ್ರೀನಿವಾಸಪುರದಲ್ಲಿ ಇದೆ ಎಂದು ಮಾಡಿದ ಸಲಹೆಗೆ ಅಲ್ಲಗಳೆದಿರುತ್ತಾರೆ. ಮುಂದುವರೆದು, ಶ್ರೀನಿವಾಸಪುರ ಉಪಖಜಾನೆಯವರು ಚೆಕ್‌ಗಳ ನಕಲು ಪ್ರತಿಗಳನ್ನು ಮಹಾಲೇಖಪಾಲಕರು, ಬೆಂಗಳೂರು ರಲ್ಲಿರುವವರಿಗೆ ಕಳುಹಿಸಿ ಕೊಟ್ಟಿರುತ್ತಾರೆ ಅಂತಾ ಮಾಡಿದ ಸಲಹೆಗೆ ಅಲ್ಲಗಳೆದಿರುತ್ತಾರೆ. ಈ ಬಗ್ಗೆ ದಿನಾಂಕ: 14/11/2014ರ ಪತ್ರದಲ್ಲಿ (ನಿ.ಡಿ.19) ನಮೂದು ಆಗಿರುತ್ತದೆ ಎಂದು ಮಾಡಿದ ಸಲಹೆಗೆ ಸಾಕ್ಷಿಯು ಕೋಲಾರ ಜಿಲ್ಲಾ ಖಜಾನಾಧಿಕಾರಿಗಳಲ್ಲಿ ವಿಚಾರಿಸಿದಾಗ, ಅಸಲಿ ಚೆಕ್‌ಗಳನ್ನು ಮಹಾಲೇಖಪಾಲಕರು, ಬೆಂಗಳೂರು ರವರಿಗೆ ಕಳುಹಿಸಿ ಕೊಡಲಾಗಿದೆ ಎಂದು ತಿಳಿಸಿರುತ್ತಾರೆ ಅಂತಾ ನುಡಿದಿರುತ್ತಾರೆ ಮತ್ತು ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಈ ವಿಷಯದ ಬಗ್ಗೆಯೂ ಸಹ ತನಿಖಾಧಿಕಾರಿಗಳು (ಪಿ.ಡಬ್ಲ್ಯೂ.1) ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆ.ಸ.ನೌ–1 ಇವರು ತಮ್ಮ ಲಿಖಿತ ವಾದವನ್ನು ಮಂಡಿಸಿದ್ದು, ಅದರಲ್ಲಿ ಆ.ಸ.ನೌ–2 ಇವರು ತಪ್ಪು ಎಸಗಿರುತ್ತಾರೆ ಅಂತಾ ಹೇಳಿರುತ್ತಾರೆ. ಆದರೆ, ಆ.ಸ.ನೌ–1 ರವರ ಪ್ರಕಾರ ತಾನು ಚೆಕ್ಕುಗಳ ಹಿಂಬದಿಯಲ್ಲಿ (ನಿ.ಡಿ.1 ಮತ್ತು ನಿ.ಡಿ.2) ದಿನಾಂಕ: 25/06/2013 ರಂದು ಸಹಿ ಮಾಡಿ ತಮ್ಮ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಗುಮಾಸ್ತರಿಗೆ ಕೊಟ್ಟಿದ್ದು, ಅವರು ದಿನಾಂಕ: 01/07/2013 ರಂದು ಬ್ಯಾಂಕಿಗೆ ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ಆ.ಸ.ನೌ–1 ಇವರು ಗುಮಾಸ್ತರನ್ನು ಕೇಳಿದಾಗ ಚೆಕ್‌ಗಳು ಇನ್ನು ನಗದೀಕರಣಗೊಂಡಿಲ್ಲ ಅಂತಾ ವಾದ ಇರುವುದರಿಂದ ನನ್ನ ಅಭಿಪ್ರಾಯದಲ್ಲಿ ಆ.ಸ.ನೌ–2 ಇವರ ತಪ್ಪು ಇರುವುದಿಲ್ಲ ಅಂತಾ ಕಂಡುಬರುತ್ತದೆ. ಮುಂದುವರೆದು, ತಮ್ಮ ಲಿಖಿತ ವಾದ ಪತ್ರದಲ್ಲಿ ಪಿ.ಡಬ್ಲ್ಯೂ.1 ಮತ್ತು ಆ.ಸ.ನೌ–2 ಇವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದು, ಅಲ್ಲದೇ ತನಗೆ ತೊಂದರೆ ಕೊಟ್ಟಿದ್ದಕ್ಕಾಗಿ ಪರಿಹಾರ ಹಣವನ್ನು ಕೊಡಿಸಬೇಕೆಂದು ಕೇಳಿರುತ್ತಾರೆ. ಆದರೆ, ಆ.ಸ.ನೌ–1 ಇವರು ದಿನಾಂಕ: 01/07/2013 ರಿಂದ 27/08/2013 ರವರೆಗೆ ಚೆಕ್‌ಗಳು ಏನಾದವು ಅಂತಾ ವಿಚಾರಣೆ ಮಾಡಿದ ಬಗ್ಗೆ ಯಾವುದೇ ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ. ಒಂದು ವೇಳೆ

ಇವರ ಗುಮಾಸ್ತ ಸರಿಯಾಗಿ ಕರ್ತವ್ಯ ನಿರ್ವಹಿಸದಿದ್ದರೆ, ಆತನಿಗೆ ನೋಟಿಸ್ ನೀಡಬೇಕಾಗಿತ್ತು, ಆದರೆ ನೀಡಿರುವುದಿಲ್ಲ. ಈಗಾಗಲೇ ಮೇಲೆ ಹೇಳಿದ ಹಾಗೆ ಪಿ.ಡಬ್ಲ್ಯೂ.1 ಇವರು ಸದರಿ ಪ್ರಥಮ ದರ್ಜೆ ಸಹಾಯಕರ ಹೇಳಿಕೆಯನ್ನು ಮಾಡಿಕೊಂಡರೂ ಸಹ ಅವರಿಂದ ಸಂಬಂಧಪಟ್ಟ ರಿಜಿಸ್ಟರ್ ಅನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ದಿನಾಂಕ: 01/07/2013 ರಿಂದ 27/08/2013 ರವರೆಗೆ ಚೆಕ್‌ಗಳು ಯಾರ ಸ್ವಾಧೀನದಲ್ಲಿದ್ದವು ಎನ್ನುವ ಬಗ್ಗೆ ಆ.ಸ.ನೌ–1 ರವರಾಗಲೀ ಅಥವಾ ಪ್ರಥಮ ದರ್ಜೆ ಸಹಾಯಕರಾಗಲೀ ವಿಚಾರಣೆ ಮಾಡಿರುವುದಿಲ್ಲ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ಆ.ಸ.ನೌ–1 ರವರು ಕೇಳಿಕೊಂಡ ಹಾಗೆ ಯಾವುದೇ ಪರಿಹಾರ ಹಣವನ್ನು ಕೊಡುವಂತೆ ಆದೇಶ ಮಾಡಲು ಬರುವುದಿಲ್ಲ.

28. ಆ.ಸ.ನೌ–2 ಇವರ ಪ್ರಕಾರ ತಾನು ದಿನಾಂಕ: 12/04/2014 ರಿಂದ 31/10/2018 ರವರೆಗೆ ಶ್ರೀನಿವಾಸಪುರ ಉಪಖಜಾನೆಯಲ್ಲಿ ಮುಖ್ಯ ಲೆಕ್ಕಿಗನಾಗಿ ಕರ್ತವ್ಯ ನಿರ್ವಹಿಸಿದ್ದು, ಆ ಸಮಯದಲ್ಲಿ ಪತ್ರಾಂಕಿತ ಉಪಖಜಾನಾಧಿಕಾರಿಯಾಗಿ ಶ್ರೀ. ಸಿ. ಮುರಳೀಧರ್ ರವರು ಕರ್ತವ್ಯ ನಿರ್ವಹಿಸುತ್ತಿದ್ದರು ಅಂತಾ ನುಡಿದಿದ್ದು, ಈ ಬಗ್ಗೆ 2014–15 ನವೆಂಬರ್ ತಿಂಗಳ ಹಾಜರಾತಿ ಪುಸ್ತಕವನ್ನು ಹಾಜರುಪಡಿಸಿದ್ದು, ಅದರಲ್ಲಿ ಇವರ ಹುದ್ದೆ ಮುಖ್ಯ ಲೆಕ್ಕಿಗರು ಅಂತಾ ನಮೂದು ಇರುತ್ತದೆ ಮತ್ತು ಶ್ರೀ. ಸಿ. ಮುರಳೀಧರ್, ಪತ್ರಾಂಕಿತ ಉಪಖಜಾನಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಪಿ.ಡಬ್ಲ್ಯೂ.1 (ತನಿಖಾಧಿಕಾರಿಗಳು) ಶ್ರೀ. ಕೆ.ಎನ್ ರಾಮಸ್ವಾಮಿ, ಪ್ರ.ದ.ಸ, ಸಮಾಜ ಕಲ್ಯಾಣ ಇಲಾಖೆ ಇವರ ಹೇಳಿಕೆಯನ್ನು ಪಡೆದುಕೊಂಡಿದ್ದು, ಅದನ್ನು ನಿ.ಪಿ.2 ಅಂತಾ ಗುರುತಿಸಲಾಗಿರುತ್ತದೆ. ಇವರು ತಮ್ಮ ಹೇಳಿಕೆಯಲ್ಲಿ ಆ.ಸ.ನೌ–1 ಇವರು ಕಳುಹಿಸಿದ ಚೆಕ್‌ಗಳನ್ನು ಆ.ಸ.ನೌ–1 ಇವರು ನಗದೀಕರಣಕ್ಕಾಗಿ ಇವರ ಇಲಾಖೆಗೆ ಮರಳಿ ಕಳುಹಿಸಿದ್ದು, ಸದರಿ ಚೆಕ್‌ಗಳ ಬಗ್ಗೆ ನವೀಕರಣಕ್ಕಾಗಿ ದಿನಾಂಕ: 16/12/2013 ರಂದು ಶ್ರೀನಿವಾಸಪುರದ ಉಪಖಜಾನೆಗೆ ನವೀಕರಣಕ್ಕಾಗಿ ಸಲ್ಲಿಸಿಕೊಂಡಿರುತ್ತೇನೆ ಅಂತಾ ಪಿ.ಡಬ್ಲ್ಯೂ.1 ಇವರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತಾರೆ. ಈ ಬಗ್ಗೆ ನಿ.ಪಿ.5 ರಡಿಯಲ್ಲಿ ಉಪಖಜಾನಾಧಿಕಾರಿಗಳು, ಶ್ರೀನಿವಾಸಪುರ ಇವರಿಗೆ ಬರೆದುಕೊಂಡ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ದಿನಾಂಕ: 16/12/2013 ರಲ್ಲಿ ಬರೆದುಕೊಳ್ಳಲಾಗಿದೆ ಅಂತಾ ಕಂಡುಬರುತ್ತದೆ. ಆದರೆ, ನಿ.ಡಿ.13 ಇದನ್ನು

ಆ.ಸ.ನೌ–1 ರವರು ಹಾಜರುಪಡಿಸಿದ್ದು, ನಿ.ಡಿ.13ರ ಪ್ರಕಾರ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಶ್ರೀನಿವಾಸಪುರ ಇವರು ದಿನಾಂಕ: 13/11/2014 ರಂದು ಉಪಖಜಾನಾಧಿಕಾರಿಗಳು, ಶ್ರೀನಿವಾಸಪುರ ಇವರಿಗೆ ಬರೆದುಕೊಂಡಿದ್ದು, ಅದರಲ್ಲಿ ಸದರಿ ಚೆಕ್‌ಗಳು ನವೀಕರಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಹಾಗೂ ಸದರಿ ಚೆಕ್‌ಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು ದಿನಾಂಕವನ್ನು ನವೀಕರಿಸಬೇಕೆಂದು ಕೋರಲಾಗಿದ್ದು ಇರುತ್ತದೆ. ನಿ.ಪಿ.5ರಲ್ಲಿ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಶ್ರೀನಿವಾಸಪುರ ಇವರು ಉಪಖಜಾನಾಧಿಕಾರಿಗಳು, ಖಜಾನೆ ಇಲಾಖೆ, ಶ್ರೀನಿವಾಸಪುರ ಇವರಿಗೆ ದಿನಾಂಕ: 16/12/2013ರ ಪತ್ರವನ್ನು ಬರೆದುಕೊಂಡಿದ್ದು, ಅದರಲ್ಲಿಯೂ ಸಹ ಲಗತ್ತಿಸಿರುವ ಚೆಕ್‌ಗಳ ದಿನಾಂಕವನ್ನು ನವೀಕರಿಸಲು ಕೋರಿದೆ ಅಂತಾ ನಮೂದು ಇದ್ದು, ಒಂದು ವೇಳೆ ದಿನಾಂಕ: 16/12/2013 ರಂದೇ ಉಪಖಜಾನಾಧಿಕಾರಿಗಳು, ಶ್ರೀನಿವಾಸಪುರ ಇವರಿಗೆ ಕಳುಹಿಸಿ ಕೊಟ್ಟಿದ್ದೇ ಆದರೆ ಮತ್ತೇ ದಿನಾಂಕ: 13/11/2014 ರಂದು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಶ್ರೀನಿವಾಸಪುರ ರವರ ಹತ್ತಿರ ಚೆಕ್ಕುಗಳು ಹೇಗೆ ಬಂದವು ಅಂತಾ ಗೊತ್ತಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ದಿನಾಂಕ: 16/12/2013 ರಂದು ಪತ್ರವನ್ನು ಬರೆದುಕೊಂಡು ಕಳುಹಿಸಿಕೊಟ್ಟಿರುವುದಿಲ್ಲ ಅಂತಾ ನಿ.ಡಿ.13ರ ಪ್ರಕಾರ ಕಂಡುಬರುತ್ತದೆ. ನಿ.ಡಿ.13ನ್ನು ಸ್ವೀಕರಿಸಿದ ನಂತರ ಮರುದಿನ ದಿನಾಂಕ: 14/11/2014 ರಂದು (ನಿ.ಡಿ.19) ಪತ್ರಾಂಕಿತ ಉಪಖಜಾನಾಧಿಕಾರಿಗಳು, ಶ್ರೀನಿವಾಸಪುರ ಉಪಖಜಾನೆ ಇವರು ಜಿಲ್ಲಾ ಖಜಾನಾಧಿಕಾರಿಗಳು, ಕೋಲಾರ ಇವರಿಗೆ ಚೆಕ್‌ಗಳನ್ನು ನವೀಕರಿಸಲು ಕೋರಿರುತ್ತಾರೆ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ತನಿಖಾಧಿಕಾರಿಗಳು ಹೇಳಿದ ಹಾಗೆ ದಿನಾಂಕ: 16/12/2013 ರಂದು ಬರೆದುಕೊಂಡಿರುತ್ತಾರೆ ಎನ್ನುವುದನ್ನು ರುಜುವಾತುಪಡಿಸಿರುವುದಿಲ್ಲ. 2014–15ರಲ್ಲಿ ಆ.ಸ.ನೌ–2 ಇವರು ನಿ.ಡಿ.15ರ ಪ್ರಕಾರ ಪತ್ರಾಂಕಿತ ಉಪಖಜಾನಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ ಅಂತಾ ಕಂಡುಬರುತ್ತದೆ.

29.ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ–1 ಮತ್ತು 2 ಇವರುಗಳ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ

ವಿಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

30. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌಕರ (1) **ಶ್ರೀ. ಎನ್ ರಾಮಚಂದ್ರಪ್ಪ,** ಹಿರಿಯ ನಾಗರೀಕರು ಮತ್ತು ಸಮಾಜ ಸೇವಕರು (ನಿವೃತ್ತ ಪ್ರಾಂಶುಪಾಲರು), ನಂ.123, ವಾರ್ಡ್ ನಂ.6, ರೈಲ್ವೇ ಸ್ಟೇಷನ್ ರಸ್ತೆ, ಕೋಲಾರ ಮತ್ತು (2) **ಶ್ರೀ. ಮೊಹಮದ್ ರಫಿ ಅಹಮದ್,** ಮುಖ್ಯ ಲೆಕ್ಕಿಗರು, ಖಜಾನೆ ಇಲಾಖೆ, ಹಿಂದಿನ ಉಪ ಖಜಾನಾಧಿಕಾರಿ, ಖಜಾನೆ ಇಲಾಖೆ ಇವರುಗಳ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ವಿಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌ–1 ರವರ ನಿವೃತ್ತಿ ದಿನಾಂಕ: 30/04/2014 ಆಗಿರುತ್ತದೆ ಮತ್ತು ಆ.ಸ.ನೌ–2 ರವರ ನಿವೃತ್ತಿ ದಿನಾಂಕ: 31/10/2018 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

2/3

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Siddalingaiah C.A S/o Amatappa, Police Inspector, Girinagar Police Station, Bengaluru. |
| 2 | **Documents marked on behalf of the Disciplinary Authority Ex.P-1 to Ex.P-6** | |
| | **Ex.P.1** | Statement of Smt. Shanthamma, Assistant Director, Social Welfare Department, Srinivasapura Taluk. |
| | **Ex.P.2** | Statement of Sri. Ramaswamy, FDA, Social Welfare Department, Malur. |
| | **Ex.P.3** | Statement of Sri. Mohammed Rafi Ahmed, I/c Deputy Treasury Officer, Social Welfare Department, Srinivasapura Taluk. |
| | **Ex.P.4** | Statement of Sri. Y.R Upendra, FDA, Govt. PU College, Gounapalli, Srinivasapura. |
| | **Ex.P.5** | Letter dtd: 30/08/2016 submitted to SP, KLA, Kolar with enclosures. |
| | **Ex.P.6& 6(a)** | Report with Signature. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. N. Ramachandrappa S/o Late Narayanappa, Rtd. Principal, Kolar. |
| | **DW-2** | Sri. Mohammed Rafi Ahmed S/o Ahmed Shafiulla, Rtd. Village Accountant, Kolar. |
| 4 | **Documents marked on behalf of the DGOs through the complainant** | |
| | **Ex.D.1 & D.2** | Copy of 2 cheques. |
| | **Ex.D.3** | Letter dtd: 28/10/2013 submitted to Taluk Social Welfare Officer, Srinivasapura Taluk, Srinivasapura. |

| | | |
|---|---|---|
| | **Ex.D.4** | Letter dtd: 02/12/2013 submitted to District Social Welfare Officer, Kolar. |
| | **Ex.D.5** | Letter dtd: 16/12/2013 submitted to Taluk Social Welfare Officer, Srinivasapura. |
| | **Ex.D.6** | Complaint dtd: 28/10/2014 given to Superintendent of Police, Karnataka Lokayukta, Kolar. |
| | **Ex.D.7** | Letter dtd: 28/10/2013 submitted to Taluk Social Welfare Officer, Srinivasapura. |
| | **Ex.D.8** | Letter dtd: 14/11/2014 submitted to SP, KLA, Kolar. |
| | **Ex.D.9** | Letter dtd: 25/11/2014 submitted to SP, KLA, Kolar. |
| | **Ex.D.10** | Complaint dtd: 24/02/2016 given to this institution. |
| | **Ex.D.11** | Form No.1. |
| | **Ex.D.12** | Form No.2 (Affidavit). |
| | **Ex.D.13** | Letter dtd: 13/11/2014 submitted to Deputy Treasury Officer, Srinivasapura. |
| | **Ex.D.14** | Copy of Attendance Registrar. |
| | **Ex.D.15** | Copy of Attendance Registrar. |
| | **Ex.D.16** | Copy of 2 cheques. |
| | **Ex.D.17** | Uncashed cheques report. |
| | **Ex.D.18** | Letter dtd: 13/11/2014 submitted to Deputy Treasury Officer, Srinivasapura. |
| | **Ex.D.19** | Letter dtd: 14/11/2014 submitted to District Treasury Officer, Kolar. |

Dated this the 21st March, 2022

21/3.

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.